ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ನವೆಂಬರ್-೨೦೦೮ ಸಂಚಿಕೆ-೪



ಸಂಪೂರ್ಣ ಕ್ರಾಂತಿಗಾಗಿ ಕಾಲ ಕೂಡಿಬಂದಿದೆ

ಜನಪದ ವಿಚಾರದಲ್ಲಿ

ನವೆಂಬರ್–೨೦೦೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ನವೆಂಬಬರ್ - ೨೦೦೮

ಸಂಪುಟ - ೯

ಸಂಚಿಕೆ - ೪

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧೪೩೧

ಜಿಲ್ಲಾ ಮಂಡ್ಯ

☎ ೦೮೨೩೬ ೩೧೬೩೪೪

e-mail - janapada@yahoo.com

ಹೊಂಚುತಿಹನು ದುಷ್ಟವ್ಯಾಪ್ರ

ಹೊಂಚುತಿಹನು ದುಷ್ಟವ್ಯಾಪ್ರ
ಅದರ ಬಾಯ್ಗೆ ಬೀಳಬೇಡ;
ನೂಕುತಾಚೆಗಲ್ಲ ಕೇಡ
ಬಾ ನನ್ನ ಒಳಗೆ ಶೀಘ್ರ

ನಾನು ನೀನು ಬೇರೆ ಜಾತಿ
ಎಂಬುವವರ ಕುಹಕ ನೀತಿ
ನಂಬಿದರದೇ ನಮಗೆ ಭೀತಿ?
ಒಂದೆ ನೀತಿ, ಒಂದೆ ಜಾತಿ
ಒಂದೇ ನಾಡು ಒಂದೆ ಬೀಡು
ಒಂದೆ ಒಂದೆ ಒಂದೆ ಒಂದೆ
ನಾವೆಲ್ಲರೂ ಒಂದೇ!

ನಿನಗೆ ಸುಖವು ಬೇಕೆ ಹೇಳು
ನನ್ನ ಮಾತು ಕೇಳು
ಬಳಿಗೆ ಬಾ ಒಳಗೆ ಬಾ
ನನ್ನೊಳಾಗಿ ನನ್ನ ಬಾಳು।
ನೀನೆ ನಾನು, ನಾನೆ ನೀನು
ಆಗಿ, ಸುಖದಿ ಬಾಳು.

- ಕುವೆಂಪು

ವಿಚಾರ ದೀಪ್ತಿ

ಕೊನೆಗೂ ರತನ್ ಟಾಟಾ ಪಶ್ಚಿಮ ಬಂಗಾಳದ ಸಿಂಗೂರ್‌ನಿಂದ ತಮ್ಮ ಚಿಕ್ಕ ಕಾರಿನ ಯೋಜನೆಯನ್ನು ಸುರುಳಿ ಸುತ್ತಿ ದೂರದ ಗುಜರಾತ್‌ಗೆ ಪಯಣ ಬೆಳಸಬೇಕಾಯಿತು. ಟಾಟಾರವರ ಈ ತೀರ್ಮಾನದ ಹಿಂದಿರುವ ಅನೇಕ ನಿಜ ಸಂಗತಿಗಳು ಅಲ್ಲಿಯ ರೈತರ ಶವದಡಿಯಲ್ಲಿ ಮುಚ್ಚಿಕೊಂಡಿವೆ. ರೈತರಿಗೆ ಭೂಮಿಯ ಬದಲಾಗಿ ಪರಿಹಾರ ಕೊಟ್ಟವರು ಟಾಟಾರವರಲ್ಲ, ಪಶ್ಚಿಮ ಬಂಗಾಳ ಸರ್ಕಾರ. ೧೩೧ ಕೋಟಿ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ಟಾಟಾ ಕಂಪನಿಯು ತಾನು ಪಡೆದ ಲೀಜ್ ಜಮೀನಿಗೆ ಕೊಡಲು ತೀರ್ಮಾನವಾಗಿದ್ದ ಬಾಡಿಗೆ ಅತ್ಯಲ್ಪ. ಟಾಟಾರವರು ಇಷ್ಟೊಂದು ಸುಲಭವಾಗಿ ಹೋಗಲು ಕಾರಣವೇನೆಂದರೆ ಅವರು ಅಲ್ಲಿ ಕಳೆದುಕೊಳ್ಳಬೇಕಾದುದು ಏನೂ ಇಲ್ಲ. ಟಾಟಾರವರು ಸಣ್ಣ ಕಾರು ಯೋಜನೆಗಾಗಿ ೧೫೦೦ ಕೋಟಿ ರೂಪಾಯಿ ತೊಡಗಿಸಿರುವುದೇನೋ ನಿಜ. ಇದರಲ್ಲಿ ಸಿಂಹಪಾಲು ಹಣ, ಯಂತ್ರಗಳು, ತುಂಬಾ ದುಬಾರಿಯಾದ ರೋಬಟ್ಟುಗಳು, ಜನರೇಟರ್‌ಗಳು, ಕಂಪ್ಯೂಟರ್‌ಗಳು ಹಾಗೂ ಯೋಜನೆಗೆ ಅಗತ್ಯವಾದ ಇನ್ನಿತರ ಚರಸ್ವತ್ತುಗಳು ಇವನ್ನು ಗುಜರಾತಿಗೆ ಸಾಗಿಸುತ್ತಾರೆ. ಅವರ ಅಂತಿಮ ನಷ್ಟ ಕಟ್ಟಡಗಳ ಭೂಮಿಯಷ್ಟೇ. ಈ ಆಸ್ತಿಯ ಮೇಲೆ ಅವರು ಖರ್ಚುಮಾಡಿರುವ ಹಣ ದೊಡ್ಡದಾಗಿಯೇ ಇದೆ. ಇದು ನಷ್ಟವೇ. ಆದರೆ ಈ ಎಲ್ಲ ಕಟ್ಟಡಗಳು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಅಗ್ಗದಲ್ಲಿಯೇ ದೊರೆತಂತಾಗುತ್ತದೆ. ಈ ಭೂಮಿಯನ್ನು ಸರ್ಕಾರವು ವಶಪಡಿಸಿಕೊಳ್ಳುವುದಕ್ಕೆ ಖರ್ಚು ಮಾಡಿದ ಹಣಕ್ಕಿಂತ ಕಡಿಮೆಯೇ ಆಗಿರುತ್ತದೆ. ಟಾಟಾರವರು ತಮ್ಮ ಈ ಕಷ್ಟಕ್ಕೆಲ್ಲಾ ಮಮತಾ ಬ್ಯಾನರ್ಜಿಯವರನ್ನೇ ಗುರಿಮಾಡುತ್ತಿದ್ದಾರೆ. ನಿಜಸಂಗತಿಯೇನೆಂದರೆ ಎಡಪಂಕ್ತಿಯ ಸರ್ಕಾರಗಳು ಮತ್ತು ಪಶ್ಚಿಮ ಬಂಗಾಳ ಹಾಗೂ ದೆಹಲಿ ಸರ್ಕಾರವು ಸಿಗ್ರೂರಿನಿಂದ ಸರಿಯಾದ ಪಾಠ ಕಲಿಯದಿದ್ದರೆ ಮಮತಾ ಭಾರತವನ್ನು ರಕ್ಷಿಸುವ ಮಹಿಳೆಯೆಂದೇ ಹೊರ ಹೊಮ್ಮಬಹುದು.

೨೦೦೬ರಲ್ಲಿ ಟಾಟಾರವರು ಭೂಮಿಯನ್ನು ಪಡೆದ ಸಂದರ್ಭದಲ್ಲಿ ನಡೆದ ಹೋರಾಟದ ೩೦ ನಿಮಿಷಗಳ ಚಲನ ಚಿತ್ರವೊಂದನ್ನು ನೋಡಿದ ಮೇಲೆ ಕಣ್ಣುಗಳು ತೆರೆದವು. ಅಭಿವೃದ್ಧಿಗಾಗಿ ಬಡವರ ರಕ್ತ ಮತ್ತು ಕಣ್ಣೀರುಗಳ ಬೆಲೆ ಅಗತ್ಯವೇ? ಟಾಟಾರವರು ತಮ್ಮ ವಾರ್ಷಿಕ ಮಾರಾಟದ ಆದಾಯದ ಶೇಕಡಾ ಒಂದರ ಕಾಲು ಭಾಗವನ್ನು ರೈತರಿಗೆ ಗೌರವಧನವೆಂದು ಕೊಟ್ಟಿದ್ದರೆ ಎಲ್ಲಾ ಸಮಸ್ಯೆಯು ಬಗೆ ಹರಿಯುತ್ತಿತ್ತು. ಈ ಗೌರವ ಧನದ ನಷ್ಟವನ್ನು ತುಂಬಿಕೊಳ್ಳಲು ಟಾಟಾರವರು ತಮ್ಮ ಕಾರಿನ ಬೆಲೆಯನ್ನು ೨೫೦ ರುಪಾಯಿ ಮಾತ್ರ ಹೆಚ್ಚಿಸ ಬೇಕಾಗಿತ್ತು. ಸಿಂಗ್ರೂರಿನ ಘಟನೆಯಿಂದ ಗೊತ್ತಾದುದೇನೆಂದರೆ ರತನ್ ಟಾಟಾ ತಮ್ಮ ತಾತ ಜಮಷಡ್ ಟಾಟಾನಂತಲ್ಲ. ಅಭಿವೃದ್ಧಿಯು ಭೂಮಿಯನ್ನು ಕಬಳಿಸುತ್ತದೆ. ವೇಗದ ಅಭಿವೃದ್ಧಿ ವೇಗವಾಗಿ ಕಬಳಿಸುತ್ತದೆ. ಸಿಂಗೂರ್ ಮತ್ತು ಬಸ್ತಾರ್ ಪ್ರಾರಂಭವಷ್ಟೆ. – *ಅನಾಮಧೇಯ*

* * *

ಸಂಪೂರ್ಣ ಕ್ರಾಂತಿಗಾಗಿ ಕಾಲ ಕೂಡಿಬಂದಿದೆ

– ಸುರೇಂದ್ರ ಕೌಲಗಿ

"೧೯೪೭ರ ರಾಜಕೀಯ ಪರಿಸ್ಥಿತಿಯನ್ನು ನೋಡುತ್ತಿದ್ದೇನೆ. ಪರಿಸ್ಥಿತಿ ಕ್ರಾಂತಿಕಾರಿಯಾಗಿದೆ. ಈ ಪರಿಸ್ಥಿತಿಯನ್ನು ಪ್ರಧಾನಮಂತ್ರಿಯಾಗಲಿ, ರಾಷ್ಟ್ರಪತಿಯಾಗಲಿ ನಿಯಂತ್ರಿಸಲು ಸಾಧ್ಯವಿಲ್ಲ." **- ಜಯಪ್ರಕಾಶ್ ನಾರಾಯಣ್**

ದೇಶ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದೆ. ಭಾರತ ಭ್ರಷ್ಟಾಚಾರದಲ್ಲಿ ಮುಳುಗಿದೆ. ದೇಶದ ರಾಜಕಾರಣ ಕುಲಗೆಟ್ಟಿದೆ. ದೇಶ ಆರ್ಥಿಕವಾಗಿ ತತ್ತರಿಸುತ್ತಿದೆ. ಸಾಮ್ರಾಜ್ಯಶಾಹಿ ದೇಶವಾಗಿರುವ ಅಮೇರಿಕಾದ ಕೈಗೆ ದೇಶ ಸಿಕ್ಕಿಹಾಕಿಕೊಂಡಿದೆ. ದೇಶದ ಆಡಳಿತ ಯಂತ್ರ ಕುಸಿಯುತ್ತಿದೆ. ಎಲ್ಲೆಲ್ಲೂ ಭಯೋತ್ಪಾದನೆ ತಾಂಡವವಾಡುತ್ತಿದೆ. ಯುವಕರು, ವಿದ್ಯಾರ್ಥಿಗಳು ದಿಕ್ಕುತಪ್ಪಿದವರಾಗಿದ್ದಾರೆ. ಮಹಿಳೆಯರು ತಮ್ಮ ಗೌರವವನ್ನು ವಾಣಿಜ್ಯಕರಣಗೊಳಿಸುತ್ತಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಜೆಗಳ ಬುದ್ಧಿಗೆ ಮಂಕುಬೂದಿಯನ್ನು ಎಸೆದಿವೆ. ಗ್ರಾಮಗಳು ನಾಶಗೊಳ್ಳುತ್ತಿವೆ. ಗ್ರಾಮೀಣರು ತಮ್ಮ ಪ್ರದೇಶಗಳಿಂದ ಉಚ್ಚಾಟಿಸಲ್ಪಡುತ್ತಿದ್ದಾರೆ. ರೈತರು ಆತ್ಮಹತ್ಯ ಮಾಡಿಕೊಳ್ಳುತ್ತಿದ್ದಾರೆ. ವ್ಯವಸಾಯ ಕ್ಷೀಣಿಸುತ್ತಿದೆ. ವ್ಯವಸಾಯ ಭೂಮಿ ಕಡಿಮೆಯಾಗುತ್ತಿದೆ. ಕೋಮುವಾದ ಬೆಳೆಯುತ್ತಿದೆ. ದಿನೇ ದಿನೇ ದೇಶದ ಆದಾಯದ ದೊಡ್ಡ ಮೊತ್ತವನ್ನು ಮಿಲಿಟರಿ ಬಲದ ವೃದ್ಧಿಗಾಗಿ ಮತ್ತು ಪೋಲಿಸ್ ವ್ಯವಸ್ಥೆಗಾಗಿ ಖರ್ಚುಮಾಡಲಾಗುತ್ತಿದೆ. ಅಭಿವೃದ್ಧಿ ನೀತಿ ದಾರಿ ತಪ್ಪಿದೆ. ಸಾಮಾಜಿಕ ಮೌಲ್ಯಗಳು ತಲೆಮರೆಸಿಕೊಳ್ಳುತ್ತಿವೆ. ಚುನಾವಣೆಗಳು ದುಬಾರಿಯಾಗುತ್ತಿವೆ. ರಾಜಕಾರಣಿಗಳ, ಅಧಿಕಾರಿಗಳದೇ ಕಾರುಬಾರು ಹೆಚ್ಚಾಗಿದೆ. ಪ್ರಜೆಗಳು ಮೂಲೆಗುಂಪಾಗಿದ್ದಾರೆ. ಜೀವನಾವಶ್ಯಕ ವಸ್ತುಗಳ ಬೆಲೆ ಏರುತ್ತಿದೆ; ಐಷಾರಾಮಿ ವಸ್ತುಗಳ ಬೆಲೆ ಕಡಿಮೆಯಾಗುತ್ತಿದೆ. ನ್ಯಾಯಾಂಗ ಜನತೆಯ ನಂಬಿಕೆಯನ್ನು ಕಳೆದುಕೊಳ್ಳುತ್ತಿದೆ. ಪ್ರಜಾತಂತ್ರದ ಅಣಕವಾಟನಡೆಯುತ್ತಿದೆ. ಎಲ್ಲೆಲ್ಲೂ ಒಳ್ಳೆಯ ನಾಯಕತ್ವದ ಅಭಾವ ಉಂಟಾಗಿದೆ. ಆರ್ಥಿಕ ವಿಷಮತೆ ಉಂಟಾಗುತ್ತಿದೆ. ನಗರಗಳಲ್ಲಿ ಸಾಮಾನ್ಯರೂ, ಬಡವರೂ ಜೀವಿಸುವದು ಕಷ್ಟವಾಗಿದೆ.

೧೯೪೭ರಲ್ಲಿ ಬ್ರಿಟಿಷರ ಆಳ್ವಿಕೆಯಿಂದ ದೇಶ ಬೇಸತ್ತಿತ್ತು, ಕೋಪಗೊಂಡಿತ್ತು. ಈಗ ೨೦೦೮ರಲ್ಲಿ ನಮ್ಮವರ ಆಡಳಿತದಿಂದಲೇ ದೇಶ ಬೇಸತ್ತಿದೆ, ಆ ಬಗ್ಗೆ ಕೋಪಗೊಂಡಿದೆ. ಎಲ್ಲೆಲ್ಲೂ ಅಸಂತೋಷ ತಾಂಡವವಾಡುತ್ತಿದೆ. ಜನರ ಮನಸ್ಸಿನಲ್ಲಿ ಉದ್ವಿಗ್ನತೆ ಉಂಟಾಗಿದೆ. ದೇಶದ ಇಂದಿನ ಪರಿಸ್ಥಿತಿಯನ್ನು ಬದಲಾಯಿಸಬೇಕಿದೆ. ಇಲ್ಲವಾದರೆ ದೇಶ ಭಯಂಕರವಾದ ಗಂಡಾಂತರಕ್ಕೆ ಬಲಿಯಾಗಬೇಕಾಗುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಾಗಿದೆ. ಮುಖ್ಯವಾಗಿ ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ಜನರು ತಮ್ಮ ಹಿಡಿತವನ್ನು ಸಾಧಿಸಬೇಕಾಗಿದೆ. ಜಾರಿ ಹೋಗುತ್ತಿರುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸುಭದ್ರಗೊಳಿಸಬೇಕಾಗಿದೆ. ಮಲಗಿರುವ ಜನತೆಯನ್ನು ಎಬ್ಬಿಸಬೇಕಿದೆ. ಯುವಕರಿಗೆ, ವಿದ್ಯಾರ್ಥಿಗಳಿಗೆ ಅವರಲ್ಲಿ ಅಡಗಿರುವ ಶಕ್ತಿಯ ಪರಿಚಯ ಮಾಡಿಕೊಡಬೇಕಿದೆ. ಗಾಂಧೀಜಿ ಒಂದು ನೂರು ವರ್ಷಗಳ ಹಿಂದೆ ತಮ್ಮ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ ಪಾರ್ಲಿಮೆಂಟ್

ಒಂದು ಬಂಜೆ, ವ್ಯಭಿಚಾರಿ ಇತ್ಯಾದಿಯಾಗಿ ವರ್ಣಿಸಿದ್ದನ್ನು ಬದಲಾಯಿಸಬೇಕಾಗಿದೆ. ನಮಗೆ ಯಂತ್ರಗಳ ಉಪಯೋಗ ಮುಖ್ಯವೋ, ಅಪಾರ ಜನಸಂಖ್ಯೆಯ ಕೈ-ಕಾಲುಗಳ ಉಪಯೋಗ ಮುಖ್ಯವೋ, ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಕಣ್ಣುಮುಚ್ಚಿ ಸ್ವೀಕರಿಸಬೇಕೋ, ವಿವೇಚನೆಯಿಂದ ಸ್ವೀಕರಿಸಬೇಕೋ ಎಂಬುದನ್ನು ನಿರ್ಧರಿಸಬೇಕಾಗಿದೆ. ಹಿಂದುಸ್ತಾನದ ಬದಲಾಗಿ ಇಂಗ್ಲಿಷ್‌ಸ್ತಾನ ಮಾಡಬೇಕೇ ಎಂಬುದನ್ನು ವಿವೇಚಿಸಬೇಕಾಗಿದೆ. ಈಗಿನ ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಸ್ವರಾಜ್ಯದ ಶಕ್ತಿಯನ್ನು ಜೋಡಿಸುವ ಬಗ್ಗೆ ಆಲೋಚಿಸಬೇಕಿದೆ. ಈ ರೀತಿ ನಾವು ಮಾಡಿಲ್ಲವಾದರೆ ಗಾಂಧೀಜಿ ಹೇಳಿದಂತೆ 'ಬ್ರಿಟಿಷ್ ಹುಲಿ'ಯ ಸ್ಥಳಕ್ಕೆ 'ಭಾರತೀಯ ಹುಲಿ'ಯನ್ನು ಅಧಿಕಾರದ ಗದ್ದುಗೆಯ ಮೇಲೆ ತಂದು ಕೂರಿಸಿದಂತಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಸರ್ಕಾರ ಕೊಳ್ಳೆಹೊಡೆದು ದೇಶವನ್ನು ಶೋಷಣೆ ಮಾಡಿತ್ತು. ಈಗ ನಮ್ಮ ರಾಜಕಾರಣಿಗಳೇ, ಅಧಿಕಾರಿಗಳೇ ಜನತೆಯನ್ನು ಶೋಷಿಸುತ್ತಿದ್ದಾರೆ. ರಾಜಕೀಯ ಶಕ್ತಿಯನ್ನು ಸಾರ್ವಜನಿಕ ಸೇವೆಗೆ ಉಪಯೋಗಿಸುವುದರ ಬದಲಾಗಿ ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸುವುದಕ್ಕಾಗಿ ಉಪಯೋಗಿಸುತ್ತಿದ್ದಾರೆ. ಇಂಥ ತತ್ವರಹಿತ, ನೀತಿರಹಿತ ರಾಜಕಾರಣವನ್ನು ತುರ್ತಾಗಿ ಬದಲಾಯಿಸಬೇಕಿದೆ. ಸ್ವಾತಂತ್ರ್ಯ ಬಂದು ಆರು ದಶಕಗಳಾದರೂ ದೇಶ ಇನ್ನೂ ಕಿಶೋರಾವಸ್ಥೆಯಿಂದ ಹೊರಬಂದಿಲ್ಲವೆಂಬುದು ದೇಶದ ಜನತೆಯ ಜ್ಞಾನಶಕ್ತಿಯ ಬೆಳವಣಿಗೆಯ ಬಗ್ಗೆ ಸಂಶಯ ಮೂಡಿಸುತ್ತದೆ.

ದುರ್ದೈವದ ಸಂಗತಿಯೇನೆಂದರೆ ದೇಶದ ನಾಯಕತ್ವವೇ ನೈತಿಕ ಆಧಾರ ಕಳೆದುಕೊಂಡಿದೆ, ಸೈದ್ಧಾಂತಿಕ ವಿಚಾರಗಳನ್ನು ಕಳೆದುಕೊಂಡಿದೆ. ಆದ್ದರಿಂದ ತನ್ನ ನೆಲೆಯನ್ನು, ತನ್ನ ನೈತಿಕತೆಯನ್ನು, ತನ್ನ ಸಿದ್ಧಾಂತಗಳನ್ನು ಭಾರತದ ಸಂಸ್ಕೃತಿಯಲ್ಲಿ, ಭಾರತದ ಮಣ್ಣಿನಲ್ಲಿ ಕಂಡುಕೊಳ್ಳಲು ವಿಫಲವಾಗಿ ಪಾಶ್ಚಿಮಾತ್ಯ ದೇಶಗಳತ್ತ ನೋಡುತ್ತಿದೆ. ಅಲ್ಲಿಯ ರಾಜಕಾರಣ, ಅಲ್ಲಿಯ ಆರ್ಥಿಕ ವ್ಯವಸ್ಥೆ, ಅಲ್ಲಿಯ ಶಿಕ್ಷಣ, ಅಲ್ಲಿಯ ಜೀವನಶೈಲಿಯನ್ನು ತನ್ನ ಆಧಾರಶಿಲೆಯನ್ನಾಗಿ ಮಾಡಿಕೊಳ್ಳುತ್ತಿದೆ. ಇದರ ಪರಿಣಾಮವಾಗಿ ದೇಶದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು, ಯಾವುದು ನಂತರದ್ದು ಎಂಬ ವಿವೇಚನೆಯೇ ಇಲ್ಲವಾಗಿದೆ. ಗಿಜಿಗುಡುತ್ತಿರುವ ಜನಸಂಖ್ಯೆಯ ಹೊಟ್ಟೆಗೆ ಅನ್ನ ಮೊದಲು ಬೇಕೇ, ನ್ಯಾನೋ ಕಾರು ಮೊದಲು ಬೇಕೇ, ಗ್ರಾಮಗಳು ಮೊದಲು ಬೇಕೇ, ನಗರಗಳು ಮೊದಲು ಬೇಕೇ, ವಸತಿ ಮೊದಲು ಬೇಕೇ, ವಿಮಾನ ನಿಲ್ದಾಣಗಳು ಮೊದಲು ಬೇಕೇ, ಚಂದ್ರಯಾನ ಮೊದಲು ಬೇಕೇ, ಸುಗಮ ದಾರಿಗಳು ಮೊದಲು ಬೇಕೇ, ಓಲೈಸುವ ಬಜೆಟ್ ಮೊದಲು ಬೇಕೇ, ಪ್ರಾಮಾಣಿಕವಾಗಿ ಪ್ರಾದೇಶಿಕ ಅಸಮತೋಲನದ ನಿವಾರಣೆಯ ಬಜೆಟ್ ಮೊದಲು ಬೇಕೇ, ಕೇವಲ ಇಂಗ್ಲಿಷ್ ಭಾಷೆಗೆ ಮೊದಲ ಮನ್ನಣೆ ಬೇಕೇ, ದೇಶದ ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಸಮಾನ ಮನ್ನಣೆ ಬೇಕೇ, ದೇಶದ ಸಾರ್ವಜನಿಕ ಜೀವನದ ಸಮಸ್ಯೆಗಳ ಪರಿಹಾರಕ್ಕೆ ಹಿಂಸೆ ಸಾಧನವಾಗಬೇಕೇ, ಅಹಿಂಸೆ ಸಾಧನವಾಗಬೇಕೇ, ಜನಶಕ್ತಿ ಸಾಧನವಾಗಬೇಕೇ, ರಾಜ್ಯಶಕ್ತಿ ಸಾಧನವಾಗಬೇಕೇ, ಸಾರ್ವಜನಿಕ ವ್ಯವಹಾರಕ್ಕೆ ಸತ್ಯ ಆಧಾರವಾಗಬೇಕೇ, ಅಸತ್ಯ ಆಧಾರವಾಗಬೇಕೇ, ಇತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲೇ ಬೇಕಾದ ಸಮಯ

ಬಂದಿದೆ. ಅರವತ್ತು ವರ್ಷಗಳ ತರುವಾಯವೂ ಈ ಪ್ರಶ್ನೆಗಳಿಗೆ ಉತ್ತರ ದೊರೆಯದಿದ್ದರೆ ನಮ್ಮ ದೇಶದ ಮಾನಸಿಕ ಆರೋಗ್ಯಕ್ಕೆ ಪರಿಣಾಮಕಾರಿ ಚಿಕಿತ್ಸೆಯನ್ನು ಮಾಡಬೇಕಾಗುತ್ತದೆ.

ಈ ಚಿಕಿತ್ಸೆಯನ್ನು ಮಾಡುವ ಕೆಲಸವನ್ನು ದೇಶದ ಯುವಕರು ಮತ್ತು ವಿದ್ಯಾರ್ಥಿಗಳು ಮಾಡ ಬೇಕಿದೆ. ೧೯೪೭ರ ನಂತರದ ತಲೆಮಾರಿನವರು ಮೇಲೆ ತಿಳಿಸಿದ ಹಲವಾರು ಬಗೆಯಲ್ಲಿ ದೇಶವನ್ನು ದುಃಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ಆದ್ದರಿಂದ ಅವರನ್ನೇ ದೇಶದ ನಿರ್ಮಾಣಕ್ಕಾಗಿ ಅವಲಂಬಿಸಿದರೆ ಭವಿಷ್ಯವೇನೂ ಒಳ್ಳೆಯದಾಗುವುದಿಲ್ಲ. ಇನ್ನು ಮುಂದಿನ ತಲೆಮಾರಿನವರೇನಾದರೂ ಒಳ್ಳೆಯ ಪರಿಸ್ಥಿತಿಯಲ್ಲಿ ತಮ್ಮ ಎಲ್ಲ ವ್ಯವಹಾರಗಳನ್ನು ನಡೆಸಬೇಕೆಂದರೆ ಈಗಿನ ಯುವಕರೇ ವ್ಯವಸ್ಥೆಯ ಬದಲಾವಣೆಯ ಹರಿಕಾರರಾಗಬೇಕು.

ಹಾಗಾದರೆ ಬದಲಾವಣೆಯ ಸಾಧನ ಯಾವುದು, ಬದಲಾವಣೆಯ ಗುರಿ ಯಾವುದು, ಬದಲಾವಣೆ ಎಲ್ಲಿಂದ, ಬದಲಾವಣೆ ಯಾರಿಂದ ಮತ್ತು ಬದಲಾವಣೆ ಎಲ್ಲಿಯವರೆಗೆ ಈ ಮುಂತಾದ ಮೂಲಭೂತ ಪ್ರಶ್ನೆಗಳನ್ನು ಹುಡುಕುವ ಕೆಲಸವನ್ನು ಯುವಕರೇ ಮಾಡಬೇಕಿದೆ.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವೇ ಒಂದು ಕ್ರಾಂತಿಕಾರಿ ಕೆಲಸವಾಗಿರುತ್ತದೆ. ಕ್ರಾಂತಿಯ ದಾರಿಯನ್ನು ತುಳಿಯಬೇಕಾದರೆ ಪೂರ್ವಗ್ರಹಗಳ ಪೊರೆಯನ್ನು ಕಳಚಿಹಾಕಬೇಕು, ಯಾವುದೇ ಇಸಂನ ಪ್ರಭಾವಲಯದಿಂದ ಹೊರಬರಬೇಕು, ಯಾವುದೇ ಬರಹವಿಲ್ಲದ ಬಿಳಿಹಾಳೆಯಂಥ ಮನಸ್ಸನ್ನು ಹೊಂದಿರಬೇಕು. ಈಗಿನ ಯಾವುದೇ ಪರಿಸ್ಥಿತಿಯ ಭಾರವನ್ನು ಮನಸ್ಸು ಹೊತ್ತಿರಬಾರದು.

ಹೊಸ ರಾಜಕಾರಣ, ಹೊಸ ಶಿಕ್ಷಣ, ಹೊಸ ಅಭಿವೃದ್ಧಿ ನೀತಿ, ಹೊಸ ಆರ್ಥಿಕ ನೀತಿ, ಹೊಸ ಸಾಮಾಜಿಕ-ಸಾಂಸ್ಕೃತಿಕ ರೂಢಿಗಳು, ಧರ್ಮಗಳ ಅರ್ಥದ ಹೊಸ ವ್ಯಾಖ್ಯಾನ ಈ ರೀತಿ ಇಡೀ ಸಮಾಜದಲ್ಲಿ ಹೊಸತನದ ಗಾಳಿ ಬೀಸಬೇಕು.

ಏಕಕಾಲಕ್ಕೆ ಇಡೀ ದೇಶದ ತುಂಬಾ ಹೊಸತನದ, ಬದಲಾವಣೆ ಪ್ರಕ್ರಿಯೆಯ ಗಾಳಿ ಬೀಸುವುದು ಕಷ್ಟವಾಗಬಹುದು. ಆಯಾ ಪ್ರದೇಶದಲ್ಲಿ ಆಯಾ ಸಮಸ್ಯೆಯ ಪರಿಹಾರಕ್ಕೆ ಮತ್ತು ಬದಲಾವಣೆಗಾಗಿ ಆಯಾ ಪ್ರದೇಶದ ಜನರು ಪ್ರಯತ್ನಿಸಬೇಕು. ಇದುವರೆಗೂ ಏಕಕಾಲದಲ್ಲಿ ಬಹುಮುಖಿ ಉದ್ದೇಶ್ಯದ ಕ್ರಾಂತಿಯಾಗಿಲ್ಲ. ಆದರೆ ಯಾವುದೇ ಪ್ರದೇಶದಲ್ಲಿ ಕ್ರಾಂತಿ ನಡೆಯಲಿ ಅದರಲ್ಲಿ ಸಮಸ್ತ ದೇಶದ ಹಿತದ ದೃಷ್ಟಿಕೋನವೇ ಇರಬೇಕು. ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಕ್ರಾಂತಿಗಳ ಮಧ್ಯ ಸಮನ್ವಯ ಇರಬೇಕು.

ಸ್ವಾತಂತ್ರ್ಯ ಬಂದ ಕೂಡಲೆ ಗಾಂಧೀಜಿಯವರನ್ನು ನಿಮ್ಮ ಮುಂದಿನ ಕೆಲಸ ಏನು ಎಂದು ಕೇಳಲಾಗಿ ಅವರಿಂದ ಬಂದ ತಕ್ಷಣದ ಉತ್ತರ, "ಪ್ರಜಾತಂತ್ರವನ್ನು ಸರಿಗೊಳಿಸುವುದು" ಎಂಬುದಾಗಿತ್ತು. ಅದೇ ರೀತಿ ಇಂದಿನ ಯುವಕರಿಗೆ ನಿಮ್ಮ ಸಧ್ಯದ ಕರ್ತವ್ಯವೇನು ಎಂದು ಕೇಳಿದರೆ, "ಸಮಾಜವನ್ನು ಬದಲಿಸುವುದು" ಎಂಬ ಉತ್ತರ ಥಟ್ಟನೆ ಬರಬೇಕು.

ಸಮಾಜದ ಬದಲಾವಣೆ ಅಂಶಿಕವಾಗಿ, ಬಿಡಿಬಿಡಿಯಾಗಿ ನಡೆದರೆ ಅದು ಕ್ರಾಂತಿಯಾಗಲಾರದು. ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆ ತರುವ ಹೋರಾಟ ನಡೆಯಬೇಕು. ಅದು ಸಂಪೂರ್ಣ ಕ್ರಾಂತಿಯಾಗಬೇಕು. ಲೋಕನಾಯಕ ಜಯಪ್ರಕಾಶ

ನಾರಾಯಣರು ೧೯೭೪ರಲ್ಲಿ ಹೂಡಿದ್ದಂಥ ಸಂಪೂರ್ಣಕ್ರಾಂತಿಯಾಗಬೇಕು.

ಇಂದು ದೇಶದ ಅಧೋಗತಿಗೆ ರಾಜಕಾರಣದ ಅಧೋಗತಿಯೇ ಕಾರಣವಾಗಿದೆ.

ಆದ್ದರಿಂದ ಸಂಪೂರ್ಣ ಕ್ರಾಂತಿಯ ಕಿಡಿಯನ್ನು ಹೊತ್ತಿಸುವ ಕೆಲಸ ರಾಜಕಾರಣದ ಕ್ಷೇತ್ರದಲ್ಲಯೇ ಮೊದಲು ಆಗಬೇಕು. ರಾಜಕಾರಣಿಗಳು ಸಮಾಜಕ್ಕೆ ಜವಾಬ್ದಾರಿಗಳಾಗಿರುವಂತೆ ಮೊಟ್ಟ ಮೊದಲು ಮಾಡಬೇಕು. ಇದಕ್ಕಾಗಿ ಯುವಕರು ಜನತೆಯನ್ನು ಸಂಘಟಿಸಬೇಕು. ಚುನಾವಣೆಗೆ ಯೋಗ್ಯ ಅಬ್ಯರ್ಥಿಗಳೇ ನಿಲ್ಲುವಂತೆ ಎಚ್ಚರವಹಿಸಬೇಕು. ಚನಾವಣೆ ನಂತರ ಗೆದ್ದ ಅಭ್ಯರ್ಥಿ ಭ್ರಷ್ಟನಾಗುತ್ತಿದ್ದಾನೆ, ಸಮಾಜದ ಒಟ್ಟು ಹಿತಕ್ಕೆ ಮಾರಕನಾಗುತ್ತಿದ್ದಾನೆ ಎಂದು ಕಂಡು ಬಂದಲ್ಲಿ ಅವನು ತನ್ನ ವಿಧಾನ ಸಭಾ ಅಥವಾ ಲೋಕಸಭಾ ಅಥವಾ ಇನ್ನಾವುದೇ ಪ್ರಾತಿನಿಧಿಕ ಸಂಸ್ಥೆಯಿಂದ ಹಿಂದಿರುಗುವುವಂತೆ ಒತ್ತಾಯ ತರುವ ಚಳುವಳಿಯನ್ನು ನಡೆಸಬೇಕು. ಈ ವಿಚಾರದಲ್ಲಿ ಜನರು ಹೆಚ್ಚು-ಹೆಚ್ಚು ಒಲವು ತೋರಿಸುತ್ತಾ ಬಂದರೆ ಸಂವಿಧಾನದಲ್ಲಿಯೇ ತಿದ್ದುಪಡಿಯಾಗುವಂತೆ ಮಾಡುವುದರ ಮೂಲಕ ಚುನವಣಾ ಕ್ರಮದಲ್ಲಿಯೇ ಇದನ್ನು ಅಳವಡಿಸಿಕೊಳ್ಳಬಹದು.

ಸಂಪೂರ್ಣ ಕ್ರಾಂತಿಯ ಎರಡನೆಯ ಮಹತ್ವದ ವಿಷಯ ರೈತರು ಯಾವ ಕಾರಣಕ್ಕೂ ತಮ್ಮ ಭೂಮಿಯನ್ನು ಬಿಟ್ಟುಕೊಡಕೂಡದೆಂಬ ಬಗ್ಗೆ ಹೋರಾಟ ನಡೆಸುವುದು. ದೊಡ್ಡ ಅಣೆಕಟ್ಟುಗಳ ನಿರ್ಮಾಣದ ನೆಪದಲ್ಲಿ, ವಿಶೇಷ ಆರ್ಥಿಕ ವಲಯಗಳ ನೆಪದಲ್ಲಿ, ವಿಮಾನ ನಿಲ್ದಾಣಗಳ ನೆಪದಲ್ಲಿ, ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ನೆಪದಲ್ಲಿ ಇನ್ನೂ ನೂರಾರು ಬಗೆಯ ನೆಪದಲ್ಲಿ ರೈತರಿಂದ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿದೆ. ಇದರ ಪರಿಣಾಮವಾಗಿ ದೇಶದ ಅರ್ಥವ್ಯವಸ್ಥೆ ಅರ್ಥಶಾಸ್ತ್ರದ ಎಲ್ಲ ನಿಯಮಗಳನ್ನು ಉಲ್ಲಂಘಿಸಿ ಜನ ಸಾಮಾನ್ಯರ ಜೀವನ ಅಸ್ತವ್ಯಸ್ತಗೊಂಡಿದೆ. ಭೂ ವಶೀಕರಣದ ಸರ್ಕಾರದ ನೀತಿಯನ್ನು ಪ್ರಶ್ನಿಸುವಷ್ಟು ಸಮರ್ಥವಾಗುವಂಥ ಹೋರಾಟ ಈ ಸಂಪೂರ್ಣ ಕ್ರಾಂತಿಯ ಒಂದು ಭಾಗವಾಗಬೇಕು.

ಸಂಪೂರ್ಣ ಕ್ರಾಂತಿಯ ಮೂರನೆಯ ವಿಷಯ ಎಲ್ಲ ಧರ್ಮಗಳಲ್ಲಿಯ ಮೂಲಭೂತವಾದವನ್ನು ಹೋಗಲಾಡಿಸುವುದು. ಎಲ್ಲ ಧರ್ಮಗಳಲ್ಲಿಯ ಎಲ್ಲ ಯುವಕರು ಈ ವಿಷಯದಲ್ಲಿ ಸಮಾನ ಚಿಂತಕರಾಗಿ ಒಂದೇ ವೇದಿಕೆಯನ್ನು ರಚಿಸಿಕೊಂಡು ಹೋರಾಟ ನಡೆಸಬೇಕು. ಆಗ ಧರ್ಮಾಧಾರಿತ ಭಯೋತ್ಪಾದನೆ ಉಚ್ಚಾಟಿತಗೊಳ್ಳುವುದು.

ಸಂಪೂರ್ಣ ಕ್ರಾಂತಿಯ ನಾಲ್ಕನೆಯ ವಿಷಯ ನಕ್ಸಲವಾದ ಅಥವಾ ಹಿಂಸಾಮಾರ್ಗದ ವಿರುದ್ಧ ಹೋರಾಟ ನಡೆಸುವುದು. ಈ ವಿಷಯದಲ್ಲಿ ಬಹಳಷ್ಟು ಕೆಲಸವನ್ನು ಯುವಕರು ಮತ್ತು ವಿದ್ಯಾರ್ಥಿಗಳು ಮಾಡಬೇಕಿದೆ.

ಸಂಪೂರ್ಣಕ್ರಾಂತಿಯ ಐದನೆಯ ವಿಷಯ ಜಾಗತೀಕರಣದ ಪರಿಣಾಮವಾಗಿ ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳ ಮೇಲಿನ ದುಷ್ಪರಿಣಾಮಗಳನ್ನು ತಡೆಯುವ ಬಗ್ಗೆ ಹೋರಾಟ ನಡೆಸಬೇಕು.

ಮೇಲ್ಕಾಣಿಸಿದ ಐದು ವಿಷಯಗಳು ಪ್ರಾತಿನಿಧಿಕವಾದವುಗಳು. ಸಂಪೂರ್ಣ ಕ್ರಾಂತಿ ಮುನ್ನಡೆದಂತೆಲ್ಲ ಇನ್ನೂ ಹಲವಾರು ಅಗತ್ಯವಾದ ಮತ್ತು ಪೂರಕವಾದ ವಿಷಯಗಳು

ಹೋರಾಟಕ್ಕೆ ಕಾರಣವಾಗುವವು.

ಕ್ರಾಂತಿಗೆ ಕಾರಣವಾಗುವ ಕಾರಣಗಳು ನೂರಾರು ಇವೆ. ಆದರೆ ಕ್ರಾಂತಿ ನಡೆಸಲು ನೂರು ಯುವಕರಾದರೂ ಮುಂದೆ ಬರುವರೇ ಎಂಬುದು ದೊಡ್ಡ ಪ್ರಶ್ನೆ. ಆದರೆ ಯಾವುದೇ ಬದಲಾಣೆಯ ಹೋರಾಟಕ್ಕೆ ಅಥವಾ ಕ್ರಾಂತಿಗೆ ಪ್ರಾರಂಭಕ್ಕೆ ಕೆಲವೇ ಜನ ಯುವಕರು ಬಂದರೂ ಸಾಕು. ಅವರು ತಮ್ಮ ಪ್ರದೇಶದಲ್ಲಿ ಸಂಪೂರ್ಣ ಕ್ರಾಂತಿಯ ಕಿಡಿಯನ್ನು ಹಚ್ಚುವ ಕೆಲಸಮಾಡಿದರೆ ಕ್ರಾಂತಿಯ ಜ್ವಾಲೆ ಕ್ರಮೇಣ ದೇಶವ್ಯಾಪಿಯಾಗುತ್ತದೆ.

ದೇಶದ ಇಂದಿನ ಒಟ್ಟಾರೆ ಸ್ಥಿತಿ ಸಂಪೂರ್ಣ ಕ್ರಾಂತಿಗಾಗಿ ಸಿದ್ಧವಾಗಿದೆ, ಕಾಲ ಕೂಡಿ ಬಂದಿದೆ. ಅಹಿಂಸಕ ಕ್ರಾಂತಿಯನ್ನು ಮಾಡಲು ಸಾಧ್ಯವಾಗದಷ್ಟು ದೇಶದ ಪರಿಸ್ಥಿತಿ ಕೆಡುವ ಮುನ್ನ, ಯುವಕರು-ವಿದ್ಯಾರ್ಥಿಗಳು ತಮ್ಮ ಪುರುಷ ಶಕ್ತಿಯನ್ನು ಕಳೆದುಕೊಳ್ಳುವ ಮುನ್ನ ಸಮಾಜದ ಸರ್ವಮುಖಿ ಸುಧಾರಣೆಯ ಅಹಿಂಸಾತ್ಮಕ ಸಂಪೂರ್ಣ ಕ್ರಾಂತಿಯನ್ನು ದೇಶದ ಯುವಜನತೆ ಪ್ರಾರಂಭಿಸಲಿ. * * *

ಸನ್ಮಾನ್ಯರಿಂದ...

* ಜನಪದ ವಿಚಾರ ಪತ್ರಿಕೆಯು ಸರ್ವಾಂಗ ಸುಂದರವಾಗಿ ಮೂಡಿ ಬರುತ್ತಿದೆ. ಎಲ್ಲರಿಗೂ ನಮನಗಳು.

– ಗೀತಾ ಪಾರ್ಥಸಾರಥಿ, ಬೆಂಗಳೂರು

* ಜನಪದ ವಿಚಾರದಲ್ಲಿ ನಿಮ್ಮ ಸಂಪಾದಕೀಯ 'ಅಭಿವೃದ್ಧಿಯ ನೀತಿಯಾಗಿ ಸರ್ವೋದಯ' ಬಹಳ ಶ್ರದ್ಧೆಯಿಂದ ಓದಿದೆ. ಅನೇಕ ವಿಚಾರಗಳನ್ನು ಕ್ರೋಢೀಕರಿಸಿದ್ದೀರಿ. ಶ್ರೀ ಸಾಮಾನ್ಯನಿಗೆ ಅರ್ಥವಾಗುವುದಿಲ್ಲ. ೧೨ ಪುಟ ಅರ್ಥಮಾಡಿಕೊಳ್ಳ ಬೇಕಾದರೆ ೧೨ ದಿವಸಗಳು ಬೇಕು. ಪಿ.ಎಚ್.ಡಿಗೆ ಸಲ್ಲಿಸಿದ ಪುಸ್ತಕದಂತಿದೆ. ಇದನ್ನು ಯಾರು ಓದುತ್ತಾರೆ. ಯಾರು ಅರ್ಥಮಾಡಿಕೊಳ್ಳುತ್ತಾರೆ. ವಿಷಯಗಳು ತುಂಬಿ ಹೋಗಿವೆ. ೪ ಅಥವಾ ೫ ಪುಟಗಳು ಇದ್ದರೆ ಚೆನ್ನ.

– ಸಿದ್ದರಾಮಯ್ಯ, ನಿವೃತ್ತ ಡಿ.ಡಿ.ಪಿ.ಐ, ಶಿಕ್ಷಣ ಇಲಾಖೆ, ಹಟ್ಟಣ

* ಇದರೊಂದಿಗೆ ಸೆಪ್ಟಂಬರ್ ವಂತಿಗೆಯನ್ನು ಕಳಿಸಿದ್ದೇವೆ. ತಮ್ಮ ಚಟುವಟಿಕೆಗಳೆಲ್ಲಾ ಚೆನ್ನಾಗಿ ನಡೆಯುತ್ತಿರಲಿ. ಸೆಪ್ಟಂಬರ್ ತಿಂಗಳ ಜನಪದ ವಿಚಾರ ಎಂದಿನಂತೆ ಚೆನ್ನಾಗಿ ಮೂಡಿ ಬಂದಿದೆ. ಎಲ್ಲ ಲೇಖನಗಳೂ ವಿಚಾರಾರ್ಹವಾಗಿವೆ. ಅವುಗಳಲ್ಲಿ ತುಂಬಾ ಹಿಡಿಸಿದ್ದು 'ಮಂಗಳ ಲೋಕದಲ್ಲಿ ಮಾವನ ಪ್ರತಿನಿಧಿ ಫೀನಿಕ್ಸ್' ಹಾಗೂ ವಿಶಿಷ್ಟ ಕೃಷಿಕ ಸತ್ಯಕಾಮ.

– ಆರ್. ಅನಂತರಾವ್ ಮತ್ತು ಆನಂದ, ಬೆಂಗಳೂರು

* 'ಅಭಿವೃದ್ಧಿಯ ನೀತಿಯಾಗಿ ಸರ್ವೋದಯ' ಲೇಖನ ಮನಮುಟ್ಟುವಂತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವ ಅನಾಹುತಗಳನ್ನು ಎಲ್ಲ ದೃಷ್ಟಿಕೋನದಿಂದ ಲೇಖಕರು ವಿಶ್ಲೇಷಿಸಿದ್ದಾರೆ. ಜನಸಾಮಾನ್ಯರಾದ ನಾವು ಇತರ ಮುಂದುವರೆದ ದೇಶದಂತೆ ನಮ್ಮ ದೇಶವೂ ಅಭಿವೃದ್ಧಿಯಾಗುತ್ತಿದೆ ಎಂಬ ಭ್ರಮೆಯಲ್ಲಿದ್ದೆವು. ಸತ್ಯಾಂಶವನ್ನು ಹೊರ ತೆಗೆದಿಟ್ಟು ಅದರಿಂದಾಗುತ್ತಿರುವ ಅಪಾಯಗಳನ್ನು ಸವಿವರವಾಗಿ ತಿಳಿಸಿದ್ದಾರೆ. ವಿಷಯ ಗಾಬರಿ ಹುಟ್ಟಿಸುವಂತಿದೆ. 'ಸರ್ವೋದಯ' ಸಿದ್ಧಾಂತವು ಇದಕ್ಕೆ ಪರಿಹಾರವೆಂದು ಲೇಖಕರು ಸೂಚಿಸಿದ್ದಾರೆ. ಈ ಯೋಜನೆ ನಿಧಾನವಾಗಿ ಫಲಿಸಿದರೂ ಅಭಿವೃದ್ಧಿಯ ಹೆಸರಿನಲ್ಲಿ ಈಗ ಆಗುತ್ತಿರುವ ಅಪಾಯಗಳಿಂದ ಪಾರಾಗಬಹುದು. ಸರ್ವೋದಯ ರೀತಿಯ 'ಜಾಗತೀಕರಣ'ವಾಗಬೇಕಿದೆ.

– ವೈದೇಹಿ, ಮೈಸೂರು

ಭಾಷೆ ಯಾರ ಸ್ವತ್ತು?

– ಡಾ. ಕೆ.ವಿ. ನಾರಾಯಣ

ಈಚೆಗೆ ಹಿರಿಯರೊಬ್ಬರು ಕೇಳಿದ ಪ್ರಶ್ನೆಯಿದು: ಭಾಷೆ ಯಾರ ಸ್ವತ್ತು? ಇದೊಂದು ಕಾಡಿಸುವ ಪ್ರಶ್ನೆಯೆಂದು ಮೇಲ್ನೋಟಕ್ಕೆ ಅನ್ನಿಸುವುದಿಲ್ಲ. ಕನ್ನಡ ಯಾರಿಗೆ ಸೇರಿದ್ದು ಎಂದು ಕೇಳಿದರೆ ಅದು ಆ ಭಾಷೆಯನ್ನು ಬಳಸುವ ಎಲ್ಲರಿಗೂ ಸೇರಿದ್ದು ಎಂದು ಉತ್ತರ ಕೊಡುತ್ತೇವೆ. ಆದರೆ ಈ ಭಾಷೆಯನ್ನು ಈ ಹಿಂದೆಯೂ ಆಡಿದವರಿದ್ದಾರೆ ಮುಂದೆ ಆಡುವವರೂ ಇದ್ದಾರೆ. ಅಂದರೆ ಕನ್ನಡ ಅವರೆಲ್ಲರಿಗೂ ಸೇರಿದ್ದು ಎಂದು ಹೇಳಬೇಕಾಗುತ್ತದೆ. ಯಾವುದೇ ಸ್ವತ್ತನ್ನು ನನಗೆ ಸೇರಿದ್ದು; ಕೆಲವರಿಗೆ ಸೇರಿದ್ದು ಇಲ್ಲವೆ ಎಲ್ಲರಿಗೂ ಸೇರಿದ್ದು ಎಂದು ಬಗೆ ಬಗೆಯಾಗಿ ನೋಡುತ್ತೇವೆ. ಸ್ವತ್ತು ಯಾರಿಗೆ ಸೇರಿದ್ದು ಎನ್ನುವುದನ್ನು ಅವಲಂಬಿಸಿ ಅದನ್ನು ಯಾರು ಹೇಗೆ ಬಳಸಬೇಕು ಮತ್ತು ಅದರ ಫಲವನ್ನು ಉಣ್ಣಬೇಕು ಎಂಬುದನ್ನು ನಿರ್ಧರಿಸುತ್ತೇವೆ. ಅದನ್ನು ಬಹುಮಟ್ಟಿಗೆ ಒಪ್ಪಿ ಆಚರಿಸುತ್ತೇವೆ. ಈ ಒಪ್ಪಂದವನ್ನು ಮೀರಿದ ಪ್ರಸಂಗಗಳು ತಿಕ್ಕಾಟಗಳಿಗೆ, ಕಾನೂನು ಸಮರಗಳಿಗೆ ಕಾರಣವಾಗುತ್ತವೆ. ಹಾಗಿದ್ದಲ್ಲಿ ಭಾಷೆ ಎನ್ನುವ ಎಲ್ಲರಿಗೆ ಸೇರಿದ ಸ್ವತ್ತಿನ ನಿರ್ವಹಣೆ ಹೇಗೆ ಆಗುತ್ತಿದೆ?

ಎಲ್ಲರಿಗೆ ಸೇರಿದ ಸ್ವತ್ತನ್ನು ಎಲ್ಲರೂ ಬಳಸದೇ ಇರಬಹುದು. ಬಳಸುವವರೂ ಕೂಡ ಬಳಸುವ ಪ್ರಮಾಣದಲ್ಲಿ ಏರುಪೇರುಗಳಿರುತ್ತವೆ. ಉರೊಟ್ಟಿನ ಮೈದಾನವೊಂದನ್ನು ಕೆಲವರು ಆಟ ಆಡಲು ಬಳಸಿಯಾರು. ಮತ್ತೆ ಕೆಲವರು ಹಾದು ಹೋಗುವ ದಾರಿ ಅದರ ನಡುವೆ ಇದ್ದೀತು. ಕೆಲವರು ತಿರುಗಾಡಿ ಬಂದಾರು. ಮತ್ತೆ ಕೆಲವರು ಎಂದೂ ಅದರೆಡೆಗೆ ತಲೆ ಹಾಕದೆಯೂ ಇದ್ದು ಬಿಡುತ್ತಾರೆ. ಆದರೆ ಇದರಿಂದ ಆ ಮೈದಾನ ಊರೊಟ್ಟಿನದು ಎಂಬುದಕ್ಕೆ ಧಕ್ಕೆಯೇನೂ ಇಲ್ಲ. ಅದನ್ನು ಕೆಲವರು ತಮ್ಮದನ್ನಾಗಿ ಮಾಡಿಕೊಂಡು ಬೇರೆಯವರ ಬಳಕೆಗೆ ಸಿಗದಂತೆ ಮಾಡಿದಾಗ ತಕರಾರುಗಳು ಹುಟ್ಟಿಕೊಳ್ಳುತ್ತವೆ. ಇಲ್ಲವೇ ಆ ಮೈದಾನವನ್ನು ಯಾವಾಗ ಯಾರು ಮತ್ತು ಏಕೆ ಬಳಸಬೇಕು ಎಂಬುದನ್ನು ಕುರಿತು ಒಮ್ಮುಖದ ನಿರ್ಧಾರಗಳನ್ನು ತೆಗೆದುಕೊಂಡಾಗಲೂ ಗೊಂದಲಗಳು ಉಂಟಾಗುತ್ತವೆ. ಭಾಷೆ ಎಲ್ಲರಿಗೆ ಸೇರಿದ ಸ್ವತ್ತು ಎಂದರೂ ಅದು ಇತರ ಸ್ವತ್ತುಗಳ ಹಾಗೆ ಇರುವಂತೆ ತೋರುತ್ತಿಲ್ಲ. ಏಕೆಂದರೆ ಅದಕ್ಕೆ ಎಲ್ಲರೂ ನೋಡಬಹುದಾದ ಗ್ರಹಿಸಬಹುದಾದ ಹೊರ ನೆಲೆ ಇಲ್ಲ. ನಾವು ಆಡುವ ಇಲ್ಲವೇ ಕೇಳುವ ಮಾತುಗಳೆಲ್ಲ ಆ ಸ್ವತ್ತಿನ ಫಲಿತಗಳೇ ಹೊರತು ಆ ಮಾತುಗಳೇ ಸ್ವತ್ತುಗಳಲ್ಲ. ಹಾಗಾಗಿ ಎಲ್ಲರಿಗೂ ಸೇರಿದ ಭಾಷೆಯೆಂಬ ಸ್ವತ್ತಿನ ದುರುಪಯೋಗ, ಅತಿಕ್ರಮಣಗಳು ನಡೆಯುತ್ತಿವೆಯೇ ಎನ್ನುವುದನ್ನು ಸುಲಭವಾಗಿ ಗುರುತಿಸಲು ಆಗುವುದಿಲ್ಲ. ನಮಗೆ ಗೊತ್ತಿಲ್ಲದಂತೆ ಎಲ್ಲರಿಗೂ ಸೇರಿದ ಸ್ವತ್ತಿನ ಮೇಲಿನ ಹಿಡಿತ ಕೆಲವರ ಕೈ ಸೇರಿರಲೂಬಹುದು. ಅದು ಹಾಗಾಗಿದೆ ಎನ್ನುವುದು ನಮಗೆ ಗೊತ್ತಾಗದೆಯೂ ಇರಬಹುದು.

ಎಲ್ಲರಿಗೂ ಸೇರಿದ ಸ್ವತ್ತುಗಳಾದ ನೆಲ ಮತ್ತು ನೀರು ಈಗ ಎಲ್ಲರಿಗೂ

ಸೇರಿದ ಸ್ವತ್ತುಗಳಾಗಿ ಉಳಿದಿಲ್ಲ. ನೆಲ ಮತ್ತು ನೆಲಕ್ಕೆ ಸೇರಿದ ಪ್ರತಿಯೊಂದು ಈಗ ಕೆಲವರ ಕೈ ಸೇರಿದೆ. ಇಲ್ಲವೆ ಕೆಲವರು ಅದರ ಬಳಕೆ ಹೇಗಾಗಬೇಕೆಂದು ತೀರ್ಮಾನಿಸುತ್ತಿದ್ದಾರೆ; ನೀರಿನ ಮಟ್ಟಿಗೂ ಇದೇ ಮಾದರಿ ಹೊಂದುವಂತೆ ತೋರುತ್ತಿದೆ. ಭಾಷೆಯ ನೆಲೆಯಲ್ಲಿಯೂ ಈ ಮಾತು ನಿಜವೇ ಎನ್ನುವುದನ್ನು ಈಗ ನಾವು ಗಮನಿಸಬೇಕಾಗಿದೆ. ಸ್ವತ್ತಿನ ಹಕ್ಕಿನ ಉಲ್ಲಂಘನೆ ಸುಲಭವಾಗಿ ಗುರುತಿಸುವಂತಿರುವ ಕೆಲವು ಪ್ರಸಂಗಗಳನ್ನು ಮೊದಲು ನೋಡೋಣ.

ಜಗತ್ತಿನಲ್ಲೆಲ್ಲಾ ಜನ ಸಮುದಾಯಗಳು ತಾವು ಹುಟ್ಟಿದ ನೆಲೆಗಳನ್ನು ತೊರೆದು ಬೇರೆ ಬೇರೆ ಕಡೆಗಳಿಗೆ ಹೋಗಿ ಬದುಕಿನ ದಾರಿಗಳನ್ನು ಹುಡುಕಿಕೊಳ್ಳುತ್ತಿದ್ದಾರೆ. ನೆಲದ ಮೇಲಿನ ಹಕ್ಕು ಯಾರಿಗೆ ಸೇರಿದ್ದು ಎಂಬ ಬಗೆಗೆ ಈಗಾಗಲೆ ಒಪ್ಪಿಕೊಂಡಿರುವ ವಿಭಜನೆಯ ನೆಲೆಯಲ್ಲಿ ಹೀಗೆ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವುದನ್ನು ವಲಸೆಗಳೆಂದು ಕರೆಯುವುದು ರೂಢಿಯಲ್ಲಿದೆ. ಹೀಗೆ ವಲಸೆ ಹೋದವರಿಗೆ ಮೂಲ ನಿವಾಸಿಗಳಿಗೆ ಒದಗುವ ಎಲ್ಲ ಹಕ್ಕುಗಳೂ ದೊರಕುವುದಿಲ್ಲ. ಇದು ಭಾಷೆಯ ಮಟ್ಟಿಗೂ ನಿಜ. ವಲಸೆ ಬಂದವರು ತಮ್ಮ ಸ್ವತ್ತಾದ ಭಾಷೆಯನ್ನು ಹೇಗೆ ಬಳಸಬೇಕು ಇಲ್ಲವೇ ಅದನ್ನು ಬಳಸಬೇಕೆ ಬೇಡವೇ ಎಂಬುದನ್ನು ನಿರ್ಧರಿಸುವವರು ಸ್ವತಃ ಅವರಲ್ಲ. ಅವರು ವಲಸೆ ನಿಂತ ನಾಡಿನ ಕೆಲವರು. ಹೀಗೆ ಮಾಡುವಾಗ ವಲಸೆ ಸಮುದಾಯಗಳೂ ತಮ್ಮ ಭಾಷೆಯ ಮೇಲಿನ ಹಕ್ಕನ್ನು ನಿಧಾನವಾಗಿ ಕಳೆದುಕೊಳ್ಳುತ್ತವೆ. ಬೇರೊಂದು ಭಾಷೆಯನ್ನು ಅವರು ಬಳಸುವವರಾಗಬೇಕಾಗುತ್ತದೆ. ಆ ಭಾಷೆಯನ್ನು ಅವರು ಬಳಸುತ್ತಿದ್ದರೂ ಅದರ ಹಕ್ಕುದಾರಿಕೆಯಲ್ಲಿ ಅವರಿಗೆ ಪಾಲಿರುವುದಿಲ್ಲ. ಟರ್ಕಿ, ಇರಾಕ್ ಮತ್ತುಇರಾನ್ ನಾಡುಗಳ ನಡುವೆ ಇರುವ ಗುಡ್ಡಗಾಡು ಪ್ರದೇಶದಲ್ಲಿ ಕುರ್ದ್ ಎಂಬ ಸಮುದಾಯವಿದೆ. ಇವರು ಆಡುವ ಕುರ್ದಿಶ್ ಭಾಷೆಯು ಅವರ ಸ್ವತ್ತಾಗಿ ಇರಬೇಕೋ ಇಲ್ಲವೇ ಅವರು ಅದನ್ನು ಬಿಟ್ಟುಕೊಟ್ಟು ಟರ್ಕಿಶ್, ಪರ್ಶಿಯನ್ ಇಲ್ಲವೇ ಇರಾಕಿಗಳಿಗೆ ಒಗ್ಗಿಕೊಳ್ಳಬೇಕೋ ಎಂಬುದು ಹಲವು ದಶಕಗಳ ಹೋರಾಟದ ಸಂಗತಿಯಾಗಿದೆ. ಹೀಗೆಯೇ ನೂರಾರು ಕಡೆಗಳಲ್ಲಿ ವಲಸೆ ಸಮುದಾಯಗಳು ತಮ್ಮ ಭಾಷೆಯೆಂಬ ಸ್ವತ್ತಿನ ಮೇಲಿನ ಹಕ್ಕನ್ನು ಕಳೆದುಕೊಳ್ಳುತ್ತಿವೆ. ಅಮೇರಿಕಾ ದೇಶದಲ್ಲಿ ರೆಡ್ ಇಂಡಿಯನ್ ಸಮುದಾಯಗಳು ತಮ್ಮ ಭಾಷೆಗಳನ್ನು ಕಳೆದುಕೊಂಡದ್ದು ಒಂದು ಕತೆಯಾದರೆ, ಈಗ ಆ ನಾಡಿನಲ್ಲಿ ಇರುವ ದೊಡ್ಡ ವಲಸೆ ಸಮುದಾಯ ಸ್ಪಾನಿಷ್ ಮಾತಾಡುವವರದಾಗಿದ್ದು ಅವರು ತಮ್ಮ ನುಡಿಗಳನ್ನು ಕಾಯ್ದುಕೊಳ್ಳಲು ಎಚ್ಚರದ ಹೆಜ್ಜೆಗಳನ್ನು ಇರಿಸಬೇಕಾಗಿದೆ. ಈ ಎಲ್ಲ ಅಂಶಗಳನ್ನು ಮನಗಂಡು ಮಾನವ ಹಕ್ಕುಗಳ ಪಟ್ಟಿಯಲ್ಲಿ ಭಾಷೆಯೆಂಬ ಸ್ವತ್ತಿನ ಹಕ್ಕನ್ನೂ ಕೂಡ ಈಗ ಸೇರಿಸಲಾಗಿದೆಯಾದರೂ ಅದನ್ನು ಉಳಿಸಿಕೊಳ್ಳಲು ದೊಡ್ಡದೊಡ್ಡ ಹೋರಾಟಗಳು ನಡೆಯುವುದು ಅನಿವಾರ್ಯವಾಗುತ್ತಿದೆ.

ಇದು ಒಂದು ನೆಲೆ. ಇನ್ನೊಂದು ನೆಲೆ ಬೇರೆಯದೇ ಬಗೆಯದ್ದು. ಇಲ್ಲ ಒಂದೇ ಭಾಷೆಯನ್ನಾಡುವ ಜನ ಸಮುದಾಯಗಳಲ್ಲಿ ಆ ಭಾಷೆ ಯಾರ ಸ್ವತ್ತು ಎಂಬುದನ್ನು ಗೊತ್ತುಮಾಡುವುದು ಕಷ್ಟವಾಗುವಂತಹಸನ್ನಿವೇಶಗಳು ನಿರ್ಮಾಣವಾಗುತ್ತವೆ. ಭಾಷೆಯ ಸಂಪನ್ಮೂಲಗಳ ಸ್ವರೂಪವನ್ನು ನಿರ್ಧರಿಸುವಲ್ಲಿ, ಅದರ ಬಳಕೆಯ ಮಾದರಿಗಳ

ಚೌಕಟ್ಟುಗಳನ್ನು ರೂಪಿಸುವುದರಲ್ಲಿ ಕೆಲವರು ಮಾತ್ರ ನಿರ್ಣಯಗಳನ್ನು ಮಾಡುವವರಾಗಿದ್ದು ಉಳಿದೆಲ್ಲ ಜನರೂ ಆ ನಿರ್ದೇಶನಗಳನ್ನು ಮತ್ತು ಮಾದರಿಗಳನ್ನು ಅನುಸರಿಸುವ ಇಕ್ಕಟ್ಟು ರೂಪುಗೊಳ್ಳುತ್ತದೆ. ಈ ನಿರ್ದೇಶನಗಳನ್ನು ಮೀರಿದ ಭಾಷಾ ಬಳಕೆಗೆ ಅಧಿಕೃತ ಮನ್ನಣೆ ದೊರೆಯುವುದಿಲ್ಲ; ಅದನ್ನು ಅಂಚಿನ ಬಳಕೆಯೆಂದು, ಅದಕ್ಕೆ ಮಾನ್ಯತೆ ನೀಡುವ ಅಗತ್ಯವಿಲ್ಲವೆಂದು ತೀರ್ಮಾನಿಸಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಭಾಷೆ ಎಲ್ಲರ ಸ್ವತ್ತು ಎನ್ನುವ ತಿಳುವಳಿಕೆಗೆ ಯಾವ ಬೆಲೆಯೂ ಇಲ್ಲವಾಗುತ್ತದೆ.

ಈ ಬಗೆಯ ನಿರ್ದೇಶನಗಳನ್ನು ಕೊಡುವವರು ತಮ್ಮ ಕ್ರಮವನ್ನು ಸರಿಯೆಂದು ಒಪ್ಪಿಸಲು ತಕ್ಕ ಕಾರಣಗಳನ್ನು ಮುಂದೊಡ್ಡುತ್ತಾರೆ. ಭಾಷೆ ಎಲ್ಲರ ಸ್ವತ್ತಾಗಿರುವುದರಿಂದ ಅದರ ಬಳಕೆಯೂ ಕೂಡ ಎಲ್ಲರಿಗೂ ಅನುಕೂಲವಾಗುವಂತೆ ಇರಬೇಕು ಎನ್ನುವುದು ಒಂದು ಕಾರಣ. ಎಲ್ಲರಿಗೂ ಸಮಾನವಾದ ರೂಪವೊಂದನ್ನು ಮುಂದಿಡುವ ಮೂಲಕ ಮತ್ತು ಅದನ್ನು ಬಳಸಲು ಕಲಿಸಿಕೊಡುವ ಮೂಲಕ ಭಾಷೆಯನ್ನು ಆಡುವವರ ನಡುವೆ ಇರುವ ಅಸಮಾನತೆಗಳನ್ನು ನಿವಾರಿಸುವ ದಾರಿಯಲ್ಲಿ ದಿಟ್ಟ ಹೆಜ್ಜೆಯನ್ನು ಇಟ್ಟಂತಾಯಿತು ಎನ್ನುವುದು ಇನ್ನೊಂದು ಕಾರಣ. ಆದರೆ ಈ ಕಾರಣಗಳ ಹಿಂದೆ ಇರುವ ತರ್ಕವನ್ನು ಎಚ್ಚರಿಕೆಯಿಂದ ಗಮನಿಸಬೇಕು. ಬಳಕೆಗೆ ಎಲ್ಲರಿಗೂ ಅನುಕೂಲವಾಗಿಸುವುದು ಮತ್ತು ಅಸಮಾನತೆಯನ್ನು ತೆಗೆದು ಹಾಕುವುದು ಎಂಬುದು ಪರುವದ ಊಟವನ್ನು ತಯಾರಿಸಿದಂತಲ್ಲ. ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವಾಗ ತಯಾರಿಸುವ ಅಡುಗೆಯಂತಲ್ಲ. ಭಾಷೆಯು ಎಲ್ಲರಿಗೂ ಸೇರಿದ ಸ್ವತ್ತಾಗಿರುವುರಿಂದ ಅದರ ಬಳಕೆಯೂ ಅವರವರ ಅಗತ್ಯಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುವುದೇ ಹೆಚ್ಚು ಸಹಜವಾದುದು. ಇದು ಎಲ್ಲರಿಗೂ ತಿಳಿಯಲಾರದೆಂಬ ಕಾರಣವನ್ನು ಮುಂದೊಡ್ಡಿ ಎಲ್ಲರಿಗೂ ತಿಳಿಯುವ ಮಾದರಿಯೊಂದಿದೆ ಎನ್ನುವ ಭ್ರಮೆಯೊಂದನ್ನು ಹುಟ್ಟಿ ಹಾಕಲಾಗುತ್ತದೆ. ಭಿನ್ನತೆಯಲ್ಲಿ ಅಡ್ಡಿಗಳಿಲ್ಲ; ಆದರೆ ಆ ಭಿನ್ನತೆಗಳು ತರತಮದ ನೆಲೆಗಳಾಗಿ ಬದಲಾದಾಗ ಮಾತ್ರ ಅಡ್ಡಿಗಳು ಹುಟ್ಟಿಕೊಳ್ಳುತ್ತವೆ. ಅಂದರೆ ಬಹುತ್ವವೆನ್ನುವುದರಲ್ಲಿ ತೊಂದರೆಯಿಲ್ಲ. ಬಹುತ್ವದ ನಿರ್ವಹಣೆಯ ತಂತ್ರಗಳನ್ನು ಸಮುದಾಯಕ್ಕೆ ಒದಗಿಸಿ ಕೊಡಬೇಕಾಗುತ್ತದೆ. ಇದಲ್ಲದೆ ಇಂದೇ ಸಮುದಾಯ ಒಂದಕ್ಕಿಂತ ಹೆಚ್ಚಿನ ಭಾಷೆಗಳನ್ನು ತನ್ನ ಸ್ವತ್ತುಗಳನ್ನಾಗಿ ಪಡೆದಾಗ ಸಮಸ್ಯೆ ಇನ್ನಷ್ಟು ಜಟಿಲವಾಗುತ್ತದೆ. ಇಲ್ಲಿಯೂ ಆಯಾ ಭಾಷೆಗಳನ್ನು ಆಡುವ ಕೆಲವರ ನಿರ್ಧಾರಗಳು ಮೇಲುಗೈ ಪಡೆದು ಸ್ವತ್ತಿನ ಜಂಟಿ ನಿರ್ವಹಣೆಗೆ ಹೊರಗಿನಿಂದ ನಿರ್ದೇಶನಗಳನ್ನು ನೀಡುವ ಪ್ರಸಂಗಗಳು ಹುಟ್ಟಿಕೊಳ್ಳುತ್ತವೆ. ಇದು ಇನ್ನೂ ಹೆಚ್ಚಿನ ಗೊಂದಲಕ್ಕೆ ಕಾರಣವಾಗುತ್ತದೆ. ಒಟ್ಟಾರೆಯಾಗಿ ಭಾಷೆಯು ಇತರ ನೈಸರ್ಗಿಕ ಮತ್ತು ನಿಸರ್ಗ ನೀಡಿದ ಸಾಮುದಾಯಿಕ ಹಕ್ಕಿನ ಸ್ವತ್ತು ಎನ್ನುವುದಾದರೆ ಅದರ ಮೇಲಿನ ಸ್ವಾಮ್ಯ ಎಲ್ಲರಿಗೂ ಇರಬೇಕೆಂಬ ನಿಟ್ಟಿನಲ್ಲಿ ನಾವೀಗ ಭಾಷಾ ನೀತಿ ಮತ್ತು ಭಾಷಾ ಯೋಜನೆಗಳನ್ನು ರೂಪಿಸಬೇಕಾದ ದಿನಗಳು ಬಂದಿವೆ.

– ಸಾಭಾರ : ಮಯೂರ

* * *

ಜನಪದ ವ್ಯಕ್ತಿ

ಧೀರೇಂದ್ರನಾಥ ಭಟ್ಟಾಚಾರ್ಯ

೧೯೪೭, ದೇಶ ವಿಭಜಿತಗೊಂಡಿತು. ಈಗಿನ ಬಾಂಗ್ಲಾದೇಶದ ಢಾಕಾ ಜಿಲ್ಲೆಯಲ್ಲಿ ನಾರಾಯಣಗಂಜ್ ಎಂಬ ಪುಟ್ಟ ಗ್ರಾಮ. ಕೋಮುಗಲಭೆಯ ಕಾರಣದಿಂದ ಈ ಗ್ರಾಮದ ಭಟ್ಟಾಚಾರ್ಯ ಎಂಬ ಯುವಕ ತನ್ನ ಗ್ರಾಮವನ್ನು ಬಿಟ್ಟು ನಿರಾಶ್ರಿತನಾಗಿ ದೆಹಲಿಗೆ ಬರಬೇಕಾಯಿತು. ಗಲಭೆಯ ಕಾರಣದಿಂದ ತನ್ನ ಮನೆ ಮತ್ತು ಆಸ್ತಿ ಎಲ್ಲವನ್ನೂ ಕಳೆದುಕೊಂಡಿದ್ದ ಭಟ್ಟಾಚಾರ್ಯ ಗಣಿ ಕಂಪನಿಯಲ್ಲಿ ಕೆಲಸ ದೊರೆತುದರಿಂದ ಮುಂಬಯಿಗೆ ಬರಬೇಕಾಯಿತು. ಈ ಕಂಪನಿಯು ಧೀರೇಂದ್ರನಾಥ ಭಟ್ಟಾಚಾರ್ಯನನ್ನು ಕರ್ನಾಟಕದ ದಕ್ಷಿಣ ಕನ್ನಡದ ಕಲಂಜಿಮಲೈ ಪ್ರದೇಶದಲ್ಲಿರುವ ಅದಿರನ್ನು ಪತ್ತೆ ಹಚ್ಚುವುದಕ್ಕಾಗಿ ಕಳುಹಿಸಿತು. ೧೯೬೦ರ ವೇಳೆಗೆ ಧೀರೇಂದ್ರನಾಥ್‌ರವರು ಕನ್ನಾನ ಎಂಬ ಹಳ್ಳಿಗೆ ಬಂದರು. ಕಲಂಜಿಮಲೈ ಪ್ರದೇಶದಲ್ಲಿ ಕಬ್ಬಿಣದ ಅದಿರನ್ನು ಪತ್ತೆ ಹಚ್ಚುವುದು ಅವರ ಜವಾಬ್ದಾರಿಯಾಗಿತ್ತು.

ಕಾಲಕ್ರಮೇಣ ಧೀರೇಂದ್ರನಾಥರ ಸಂಬಂಧ ಸ್ಥಳೀಯರೊಂದಿಗೆ ನಿಕಟವಾಗುತ್ತಾ ಹೋಯಿತು. ಅವರಲ್ಲಿ ಕಡುಬಡತನವಿರುವುದನ್ನು ಕಂಡ ಧೀರೇಂದ್ರನಾಥರಿಗೆ ತಾವು ದೆಹಲಿಯ ನಿರಾಶ್ರಿತರ ಕೇಂದ್ರದಲ್ಲಿ ಅನುಭವಿಸಿದ್ದ ಕಷ್ಟಗಳು ಮತ್ತು ದುಃಖಗಳು ನೆನಪಿಗೆ ಬಂದವು. ಆದ್ದರಿಂದ ಕನ್ನಾದ ಜನರ ಕಷ್ಟಗಳಿಂದ ಅನುಕಂಪಿತರಾದರು. ಮುಂಬಯಿ ಕಂಪನಿಯು ಅವರನ್ನು ಬೇರೆಡೆ ವರ್ಗ ಮಾಡಿದರೂ ಕೂಡ ಹೋಗದೆ ಕನ್ನಾನಲ್ಲಿಯೇ ಉಳಿದುಕೊಂಡರು.ಮುಂದೆ ೧೯೬೪ರಲ್ಲಿ ಭಾರತ ಸೇವಾಶ್ರಮ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಒಂದು ಸಾಧಾರಣ ಗುಡಿಸಲಿನಲ್ಲಿ ೫ ಅನಾಥ ಮಕ್ಕಳನ್ನು ಇಟ್ಟುಕೊಂಡು ತಮ್ಮ ಸೇವೆಯನ್ನು ಪ್ರಾರಂಭಿಸಿದರು. ದಿನಾಲೂ ಮನೆಯಿಂದ ಮನೆಗೆ ಹೋಗಿ ತಮ್ಮ ಆಶ್ರಮದ ಮಕ್ಕಳ ಊಟಕ್ಕಾಗಿ ದಾನವನ್ನು ಸಂಗ್ರಹಿಸಲು ಆರಂಭಿಸಿದರು. ಧೀರೇಂದ್ರನಾಥರವರೊಂದಿಗೆ ಅವರ ಹೆಂಡತಿ ಸರೋಜಿನಿ ಕೂಡ ಆಶ್ರಮದ ಜವಾಬ್ದಾರಿಯನ್ನು ನಿರ್ವಹಿಸಲು ಪ್ರಾರಂಭಿಸಿದರು. ಆಶ್ರಮಕ್ಕೆ ಬೇಕಾದ ಹಣ ಸಂಗ್ರಹಿಸುವುದಕ್ಕಾಗಿ ಗಂಧದ ಕಡ್ಡಿಯನ್ನು ತಯಾರಿಸುತ್ತಿದ್ದರು. ಎಷ್ಟೇ ಆರ್ಥಿಕ ಮುಗ್ಗಟ್ಟು ಉಂಟಾದರೂ ಕೂಡ ಭಟ್ಟಾಚಾರ್ಯ ದಂಪತಿಗಳು ಅನಾಥ ಮಕ್ಕಳ ತಮ್ಮ ಸೇವಾ ಸಂಕಲ್ಪವನ್ನು ಬಿಟ್ಟುಕೊಡಲಿಲ್ಲ. ಇವರೊಂದಿಗೆ ಇವರ ನಾಲ್ಕು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಕೂಡ ಅನಾಥ ಮಕ್ಕಳೊಂದಿಗೆ ಆಶ್ರಮದಲ್ಲಿ ಇದ್ದುಕೊಂಡು ಸರಳ ಜೀವನ ನಡೆಸುತ್ತಾ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡರು. ಹೀಗೆ ಇಡೀ ಕುಟುಂಬವೇ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿತು. ಈಗ ಭಾರತ ಸೇವಾಶ್ರಮದಲ್ಲಿ ೨೪೮ ಜನ ಮಕ್ಕಳಿದ್ದಾರೆ. ಆಶ್ರಮದ ಮಕ್ಕಳು ಶಾಲೆಗೆ ಹೋಗುತ್ತಾರೆ. ಉಳಿದವರು ಹಪ್ಪಳ ಮಾಡುವುದು, ಹೊಲಿಗೆ, ಸಾವಯವ ಕೃಷಿ, ಗೋಪಾಲನೆ, ಮುದ್ರಣಾಲಯದ ಕೆಲಸ ಇತ್ಯಾದಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅವರ ಗೋಶಾಲೆಯಲ್ಲಿ ಸುತ್ತಲಿನ ಪ್ರದೇಶದಲ್ಲಿಯ

ಸುಮಾರು ಎಪ್ಪತ್ತು ಅನಾಥ ಹಸುಗಳಿವೆ. ಈಗ ಆಶ್ರಮವು ಸ್ವಂತ ಕಟ್ಟಡ ಹೊಂದಿ ಎಲ್ಲಾ ಸೌಕರ್ಯಗಳು ಇವೆ.

ಅನಾಥ ಮಕ್ಕಳ ಈ ಆಶ್ರಮವಲ್ಲದೆ ಸೇವಾ ಸದನವೆಂಬ ಒಂದು ಕೇಂದ್ರ ಆರಂಭಿಸಿದ್ದಾರೆ. ಅದರಲ್ಲಿ ಹಿರಿಯ ನಾಗರಿಕರ ಕ್ಷೇಮಪಾಲನೆ ನಡೆಯುತ್ತದೆ. ಕನ್ಸಾನ ಗ್ರಾಮದ ಈಶ್ವರಭಟ್ ಈ ಸಂಸ್ಥೆಯ ಕಾರ್ಯದರ್ಶಿಯಾಗಿದ್ದಾರೆ. ಭಟ್ ಸ್ವತಃ ಅನಾಥರಾಗಿದ್ದರು. ಅವರನ್ನು ದೀರೇಂದ್ರನಾಥರು ತಮ್ಮ ಆಶ್ರಮದಲ್ಲಿ ಆಶ್ರಯ ಕೊಟ್ಟು ಬೆಳೆಸಿದರು. ಜೊತೆಗೆ ಶಿಕ್ಷಣವನ್ನೂ ಕೊಟ್ಟರು. ಈಶ್ವರಭಟ್ಟರು ಕಾನೂನು ಪದವೀಧರರಾದರು. ಆಗ ದೀರೇಂದ್ರನಾಥರು ಈಶ್ವರಭಟ್ಟರಿಗೆ ಎರಡು ಆಯ್ಕೆಗಳನ್ನು ಕೊಟ್ಟರು. ಒಂದು ಆಶ್ರಮದಲ್ಲಿದ್ದುಕೊಂಡು ಅದರ ಜವಾಬ್ದಾರಿಯನ್ನು ನಿರ್ವಹಿಸುವುದು, ಎರಡು ಆಶ್ರಮದ ಹೊರಗಿದ್ದು ತಮಗೆ ಬೇಕಾದ ವೃತ್ತಿ ಕೈಗೊಳ್ಳುವುದು. ಈ ಎರಡು ಆಯ್ಕೆಗಳಲ್ಲಿ ಈಶ್ವರಭಟ್ಟರು ಮೊದಲನೆಯದನ್ನು ಆಯ್ಕೆಮಾಡಿಕೊಂಡರು. ಏಕೆಂದರೆ ಈಶ್ವರಭಟ್ಟರಿಗೆ ಧೀರೇಂದ್ರನಾಥರ ಋಣವನ್ನು ತೀರಿಸಬೇಕೆಂದು ಅನಿಸಿತ್ತು. ಮುಂದೆ ಧೀರೇಂದ್ರನಾಥರು ತಮ್ಮ ಮಗಳನ್ನು ಈಶ್ವರಭಟ್ಟರಿಗೆ ಕೊಟ್ಟು ಮದುವೆ ಮಾಡಿದರು. ಈ ರೀತಿ ದೂರದ ಬಾಂಗ್ಲಾದೇಶದಿಂದ ಬಂದ ಧೀರೇಂದ್ರನಾಥ ಭಟ್ಟಾಚಾರ್ಯರು ಸಂಪೂರ್ಣವಾಗಿ ಕರ್ನಾಟಕದವರಾಗಿದ್ದಾರೆ. ತಮ್ಮ ಭಾರತ ಸೇವಾಶ್ರಮದ ಮೂಲಕ ಭಾರತೀಯ ತತ್ವವನ್ನು ಸಾಕಾರಗೊಳಿಸಿದ್ದಾರೆ.

* * *

ಬಾಂಧವ್ಯ

ಜನಪದ ವಿಚಾರವು
ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

೧) ಶ್ರೀ.ಎನ್.ಎಸ್.ಸುಬ್ಬಣ್ಣ, ಬೆಂಗಳೂರು.
೨) ಶ್ರೀ.ಎಸ್.ಎಚ್.ಜೋಶಿ, ಬೆಂಗಳೂರು.
೩) ಶ್ರೀಮತಿ.ಗೀತಾಪಾರ್ಥಸಾರಥಿ, ಬೆಂಗಳೂರು.

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ ಪತ್ರಿಕೆಗೆ ಹೊಸದಾಗಿ ಚಂದಾದಾರರಾದ ಮಾನ್ಯ

೧) ಪ್ರೋ. ವಿ. ಜಗನ್ನಾಥ್, ಮೈಸೂರು
೨) ಶ್ರೀ ಪಿ.ಎಸ್. ಚಂದ್ರಣ್ಣ, ಮೈಸೂರು
೩) ಕೆ. ಅಮರನಾಥ್, ಬೆಂಗಳೂರು
೪) ಶ್ರೀ ಮಹಂತೇಶ್ ಯತ್ನಟ್ಟಿ, ಹುಬ್ಬಳ್ಳಿ
೫) ಶ್ರೀ ಜೆಸಿ ಕ್ಲೆಮೆಂಟ್, ಬೆಂಗಳೂರು

ಇವರಿಗೆ ಕೃತಜ್ಞತೆಗಳು.

ಗಾಂಧಿಯವರ ಸಮಾಧಿ

– ಗುರುದಯಾಳ್ ಮಲ್ಲಿಕ್

ಅದು ಸೂರ್ಯೋದಯದ ಪವಿತ್ರ ಘಳಿಗೆ. ಹಳೆ ದಿಲ್ಲಿಯಲ್ಲಿ ಅನೇಕರು ಪವಿತ್ರ ನದಿ ಯಮುನೆಯಲ್ಲಿ ಸ್ನಾನಮಾಡಿ ಶುದ್ಧರಾಗಲು ಹಲವಾರು ರಸ್ತೆಗಳ ಮೂಲಕ ಹೋಗುತ್ತಿದ್ದರು. ೧೯೪೮ ಜನವರಿ ೩೧ರಂದು ಮಹಾತ್ಮಾ ಗಾಂದೀಜಿಯವರ ಚಿತೆ ಭಸ್ಮವಾದ ಸ್ಥಳಕ್ಕೆ ಬಂದ ತಕ್ಷಣ ಬಹಳಷ್ಟು ಜನ ಒಂದು ಕ್ಷಣ ಅಲ್ಲಿ ನಿಂತು ಆತನ ಸ್ಮರಣಾರ್ಥ ತಮ್ಮ ಶ್ರದ್ಧಾಯುಕ್ತ ನಮನವನ್ನು ಮೌನವಾಗಿಯೇ ಸಲ್ಲಿಸುತ್ತಿದ್ದರು. ಅವರಲ್ಲಿ ಅನೇಕರು ತಮ್ಮ ಪ್ರೀತಿಯ ಸ್ಮರಣೆಯನ್ನು ಗಾಂಧೀಜಿ ತಮ್ಮ ಜೀವನದ ಕೊನೆ ದಿನಗಳಲ್ಲಿ ಜನಪ್ರಿಯಗೊಳಿಸಿದ್ದ ಚತುಷ್ಪದಿಯನ್ನು ಪುನರುಚ್ಚರಿಸುತ್ತಿದ್ದರು :–

> ರಘುಪತಿ ರಾಘವ ರಾಜಾರಾಮ।
> ಪತಿತ ಪಾವನ ಸೀತಾರಾಮ॥
> ಈಶ್ವರ ಅಲ್ಲಾ ತೇರೇನಾಮ।
> ಸಬಕೊ ಸನ್ಮತಿ ದೇ ಭಗವಾನ್॥

ನಾನು ದೂರ ನಿಂತು ಈ ಭಜನೆಯನ್ನು ಕೇಳಿಸಿಕೊಳ್ಳುತ್ತಾ ನನ್ನಲ್ಲಿಯೇ ಹೀಗೆ ಅಂದು ಕೊಂಡೆ "ಇಂದು ಜನರರ ಸ್ನಾನ ನೈಜ ಪಾವಿತ್ರ್ಯದ ಸುಗಂಧ ಹೊಂದುವುದು. ಏಕೆಂದರೆ ದೇವದೂತರ ಪಾದಗಳಡಿಯಲ್ಲಿಯ ಧೂಳು ಅತ್ಯಂತ ಪಾವನ ನದಿಗಳ ಸ್ವಚ್ಛವಾದ ನೀರಿಗಿಂತ ಹೆಚ್ಚು ಪರಿಶುದ್ಧ ಮಾಡುತ್ತದೆ.

ಅವರಲ್ಲಿ ಬಹಳಷ್ಟು ಜನರು ಆ ಚೌಪದಿಯ ಕಡೆಯ ಎರಡು ಸಾಲುಗಳನ್ನು ಪುನರುಚ್ಚರಿಸುತ್ತಿರಲಿಲ್ಲವೆಂಬುದನ್ನು ಗಮನಿಸಿದೆ. ನೆರತ ಕೂದಲಿನ ಅಜ್ಜಿಯರು ಮಾತ್ರ ಸ್ವಯಂ ಪ್ರೇರಣೆಯಿಂದ ಅದನ್ನು ಪೂರ್ಣವಾಗಿ ಪುನರುಚ್ಚರಿಸುತ್ತಿದ್ದರು. ಭಾರತದ ಉದ್ಗ್ರಂಥದ ರಾಮನಿಗೆ ಮತ್ತು ಸರ್ವಾಂತರ್ಯಾಮಿಯೂ ಆದ ರಾಮನಿಗೆ ಗಾಂಧೀಜಿ ಪರಿಪೂರ್ಣತೆಯನ್ನೂ, ಹೊಸ ಅರ್ಥವನ್ನೂ ತಂದು ಕೊಟ್ಟಿದ್ದಾರೆಂದು ಅವರಿಗೆ ಅನಿಸುತ್ತಿತ್ತು. ಆ ಭಜನೆಯ ಕೊನೆಯ ಸಾಲುಗಳನ್ನು ಹೇಳದೆ ಬಿಡುವುದೆಂದರೆ ಜನರನ್ನು ಸಂಕುಚಿತತೆಯ ಬಂಧನದಿಂದ ಮುಕ್ತಗೊಳಿಸಿ ಅಂತ್ಯವಿಲ್ಲದ ಸತ್ಯದ ವಿಶಾಲಕ್ಷೇತ್ರಕ್ಕೆ ತರುವುದಕ್ಕಾಗಿ ಗಾಂಧೀಜಿ ನಡೆಸಿದ ಇಡೀ ಜೀವಮಾನದ ಕೆಲಸವನ್ನೇ ಹಾಳು ಮಾಡಿದಂತೆ ಎಂದು ನನಗನಿಸಿತು. ಪೂಜೆಮಾಡುವ ಮೂರ್ತಿಯನ್ನು ಕೇವಲ ಮನೆಯ ಮಟ್ಟಿಗಿನ ಮೂರ್ತಿಯೆಂದು ತಿಳಿಯದೆ ಅದು ಇಡೀ ಜಗತ್ತಿನ ಮೂರ್ತಿಯೆಂದು ತಿಳಿಯದೆ, ಅದು ಇಡೀ ಜಗತ್ತಿನ ಮೂರ್ತಿಯೆಂದು ಅವರು ಕಲಿಸಿದ್ದರು. ಈ ವಿಚಾರ ನನ್ನನ್ನು ಖಿನ್ನತೆಗೂ, ನಿರಾಶಾಭಾವಕ್ಕೂ ತಳ್ಳಿತು. ಭಜನೆ ಹೇಳುವವರು ಕಣ್ಮರೆಯಾದ ಕೂಡಲೆ ಮತ್ತು ಅವರ ಧ್ವನಿ ಕೇಳದಂತಾದ ಕೂಡಲೆ ನಾನು ಸಮಾಧಿಯ ಬಳಿ ಏಕಾಂತವಾದ ಒಂದು ಮೂಲೆಯನ್ನು

ಹುಡುಕಿಕೊಂಡು ಧ್ಯಾನದಲ್ಲಿ ತಲ್ಲೀನನಾದೆ. ಧ್ಯಾನಾಸಕ್ತನಾಗಿದ್ದಾಗ ಮಧ್ಯದಲ್ಲಿ ಅಮರ ಗಾಂಧೀಜಿಯ ಇರುವಿಕೆ ಭಾಸವಾಯಿತು.

ಸ್ವಲ್ಪ ಸಮಯದ ನಂತರ ಕಣ್ಣುತೆರೆದಾಗ ಆಗಲೆ ಸೂರ್ಯ ದಿಗಂತದಲ್ಲಿ ಮೇಲೇರಿದ್ದ. ಅವನ ಕಿರಣಗಳು ನನ್ನ ನೆತ್ತಿಯ ಮೇಲೆ ಇದ್ದವು. ಅವು ನನ್ನ ಮನೋಅಕ್ಷಿಯ ಮುಂದೆ ಗಾಂಧೀಜಿಯವರ ಹಸ್ತ ನನ್ನ ತಲೆಯ ಮೇಲೆ ಇದ್ದು ಆಶೀರ್ವದಿಸುತ್ತಿರುವಂತೆ ಇಂದ್ರಚಾಪವನ್ನು ನಿರ್ಮಿಸಿದ್ದವು.

ನನ್ನ ಆತ್ಮಸಾಕ್ಷಿ ಊರ್ಧ್ವಮುಖಿಯಾಗಿ ತಿರುವು ತೆಗೆದುಕೊಂಡಿತು. ಈ ಕನಸಿನೊಂದಿಗೆ ಎಲ್ಲವೂ ಸರಿಹೋಗುವುದೆಂಬ ಸಂತೋಷಕರವಾದ ಭರವಸೆಯೂ ಸಿಕ್ಕಿತು. ನಾನು ಹೊರಡಲು ಸಿದ್ಧನಾಗುವ ವೇಳೆಗೆ ದೂರದ ವಾಯುವ್ಯ ಗಡಿಯ ಓರ್ವ ಪಠಾಣ ಬಂದಿದ್ದ. ಅವನು ಸೃಷ್ಟಿಕರ್ತನೊಂದಿಗೆ ಪೂರ್ಣ ತನ್ಮಯನಾಗಿ ಆ ಪವಿತ್ರ ನೆಲದ ಮೇಲೆ ಕೂತಿದ್ದನ್ನು ಕಂಡೆ. ಸ್ವಲ್ಪ ಹೊತ್ತಿನ ನಂತರ ತನ್ನ ಧರ್ಮದ ಗ್ರಂಥದಲ್ಲಿಯ ಸಾಲುಗಳನ್ನು ಓದಲು ಪ್ರಾರಂಭಿಸಿದ. ಓದಿಯಾದ ಮೇಲೆ ಅವನು ಎದ್ದು ನಿಂತು ಹೀಗೆ ಪ್ರಾರ್ಥಿಸಲಾರಂಭಿಸಿದ:–

ಓ ದೇವರೇ, ಗಾಂಧಿಯ ಆತ್ಮಕ್ಕೆ ಶಾಂತಿಯನ್ನು ಕೊಡು. ಆತನು ಪ್ರತಿ ನಿಮಿಷವೂ ನಿನ್ನ ಪ್ರೀತಿಯಿಂದ ಹುಚ್ಚನಾಗಿದ್ದ. ಆತ ನಿಜವಾಗಿ ಪ್ರಾಮಾಣಿಕನಾದ, ಪ್ರೀತಿ ಪಾತ್ರನಾದ ನಿನ್ನ ಸೇವಕನಾಗಿದ್ದ. ಅಲ್ಲ, ಅವನು ನಿನ್ನ ಧರ್ಮಪ್ರಚಾರಕರಲ್ಲಿ ಒಬ್ಬನಾಗಿದ್ದ. ಸತ್ಯದ ನೇರವಾದ ದಾರಿಯಲ್ಲಿ ಹೇಗೆ ನಡೆಯಬೇಕೆಂಬುದನ್ನು ಅವನು ಕಲಿಸಿದ್ದ. ನಿನ್ನ ಮಕ್ಕಳಾದ ನಾವು ಅನವಶ್ಯಕವಾಗಿ ನಿನ್ನ ಹೆಸರಿನಲ್ಲಿ ಪರಸ್ಪರ ಕಾದಾಡುತ್ತೇವೆ. ಅವನು ವಾತ್ಸಲ್ಯ ಮತ್ತು ಏಕತೆಯ ನಿಜವಾದ ಹೆದ್ದಾರಿಯನ್ನು ತೋರಿಸಿದ್ದ. ಆದ್ದರಿಂದ ದೇವರೇ, ನೀನು ನಮಗೆ ಗಾಂಧೀಜಿ ಬೆಳಗಿಸಿದ ದಾರಿಯಲ್ಲಿ ನಡೆಯುವ ಬುದ್ಧಿಯನ್ನೂ, ಉತ್ಸಾಹವನ್ನೂ, ನೀತಿಯನ್ನೂ ಕೊಡು. ಒಳ್ಳೆಯದಾಗಲಿ.

ಅವನ ಪ್ರಾರ್ಥನೆ ಮುಗಿಯಿತು. ಪಠಾಣ ಸಮಾಧಿಯಿಂದ ದೂರ ನಡೆದ. ಮೌನದಿಂದ ಅವನ ಮುಖ ಗಂಭೀರವಾಗಿತ್ತು, ಅವನ ಕಣ್ಣುಗಳು ಅಶ್ರುಗಳಿಂದ ಪ್ರಕಾಶಮಾನವಾಗಿದ್ದವು. ಸಹಜವಾಗಿ ಅಶ್ರುಗಳು ನನ್ನ ಕೆನ್ನೆಯ ಮೇಲೂ ಹರಿಯಲಾರಂಭಿಸಿದವು. ಅಶ್ರುಧಾರೆಯ ಪ್ರವಾಹದಲ್ಲಿ ನಾವು ನಮ್ಮ ಅಂತರ್ಯದ ವಿಶಾಲ ಹಾಗೂ ಪ್ರಕಾಶಮಾನ ಆತ್ಮದಲ್ಲಿ ಮುಳುಗಿ ಜೀವನದ ರೂಪರಹಿತ ಮತ್ತು ಮೇರೆ ರಹಿತ ಸತ್ಯದ ಏಕತೆಯ ತುದಿಯನ್ನು ಮುಟ್ಟಿದೆವು.ಪಠಾಣನು ಹಳೇ ದಿಲ್ಲಿಯತ್ತ ನಡೆದ ನಾನು ಹೊಸ ದಿಲ್ಲಿಯತ್ತ ನಡೆದೆ. ಆಗ ಮೇವಾಡದ ಸನ್ಯಾಸಿನಿ ರಾಣಿ ಮೀರಾಬಾಯಿಯ ಒಂದು ಹಾಡಿನ ಶಬ್ದಗಳನ್ನು ನೆನಪಿಸಿಕೊಂಡೆ.

"ಹೃದಯದ ಆಳವಾದ ಗುಹೆಯಲ್ಲಿ ಭಗವಂತನಿದ್ದಾನೆ. ಪ್ರೇಮ ನದಿಯ ದಡದಲ್ಲಿ ನಾ ಅವನನ್ನು ಭೇಟಿಯಾದೆ." ನನ್ನ ಕಣ್ಣೀರಿನೊಂದಿಗೆ ಸೇರಿದ ಪಠಾಣನ ಕಣ್ಣೀರು ಈ ಅದೃಶ್ಯ ನದಿಯ ತುಂತುರುಗಳಾಗಿದ್ದವೆ? ಯಾರು ತಾನೆ ಹೇಳಲು ಸಾಧ್ಯ? ಬಹುಶಃ ಅನಾದಿ ಕಾಲದ ರಹಸ್ಯಗಳ ಭಂಡಾರವಗಿರುವ ಆ ತಾರೆಗಳು ಉತ್ತರ ಕೊಡಲು ಶಕ್ತವಾಗಬಹುದು.

ಗಾಂಧೀ ಮತ್ತು ಟಾಗೋರ್

ಗಾಂಧೀಜಿ ಸತ್ಯ ಪ್ರೇಮಿಯಾಗಿದ್ದರು. ಅವರ ಪ್ರತಿಯೊಂದು ಕೃತಿ, ಪ್ರತಿಯೊಂದು ವಿಚಾರ ದೇದೀಪ್ಯಮಾನವಾಗಿಯೂ, ಅನಂತವಾಗಿಯೂ ಇದ್ದವು. ಅವರ ಇಡೀ ಜೀವನ ವಿಶಾಲವಾದ ಪ್ರಯೋಗಾಲಯವಾಗಿತ್ತು. ಅಲ್ಲಿ ವಿಜ್ಞಾನಿಯ ಆತ್ಮ ಸಮರ್ಪಣಾಭಾವದೊಂದಿಗೆ ಮುಗಿಯದ ಮಹಾನ್ ಪ್ರಯೋಗಗಳನ್ನು ಮಾಡುತ್ತಿದ್ದರು.

ಟಾಗೋರರು ಸಹಜವೂ, ಭಯುಹುಟ್ಟಿಸುವಂಥದೂ, ಗಂಧರ್ವ ಲೋಕದಂಥದೂ ಆದ ಸೌಂದರ್ಯದ ಮೋಡಿ ಮತ್ತು ಅದರ ವಿಶಾಲ ಹರವಿನ ಆರಾಧಕರಾಗಿದ್ದರು. ನಕ್ಷತ್ರಗಳ ಹೆಜ್ಜೆಯ ತಾಳಕ್ಕನುಗುಣವಾಗಿ ಹೊಂದಿಕೊಳ್ಳುವ ಋತುಗಳ ಸಮ್ಮೋಹಕ ಗಾನವೇ ಜೀವನವೆಂದು ಭಾವಿಸಿದ್ದರು.

ಗಾಂಧೀಜಿ ಹಸಿವೆಯಿಂದ ನರಳುತ್ತಿರುವವರ, ನೊಂದವರ, ಸೇವೆಗಾಗಿ ನೇಗಿಲು ಹಿಡಿದರು, ರಾಟೆ ತಿರುಗಿಸಿದರು. ಏಕೆಂದರೆ ಹಸಿದ ಹೊಟ್ಟೆ ಭಗವಂತನ ಆವಾಸಕ್ಕೆ ಪವಿತ್ರವಾದ ಅಥವಾ ಸೂಕ್ತವಾದ ಸ್ಥಾನವಾಗಲಾರದೆಂದು ಅವರು ನಂಬಿದ್ದರು. ಟಾಗೋರರು ಕೊಳಲನ್ನು ಬಗೆಬಗೆ ಶೃತಿಯಲ್ಲಿ ನುಡಿಸುವುದರ ಮೂಲಕ ಯುವಕರಿಗೆ ದೈವೀ ಸಂಕಲ್ಪದ ಗಾಂಭೀರ್ಯತೆಯಿಂದ ಸಾರ್ಥಕ್ಯದ ದಾರಿಯಲ್ಲಿ ನಡೆಯುವಂತೆ ಬೆಳೆಯುತ್ತಿರುವ ಮಕ್ಕಳಿಗೆ ಬೋಧಿಸಿದರು.

ಗಾಂಧೀಜಿ ತಮ್ಮ ಸಹಜೀವಿಗಳ ಬಗ್ಗೆ ಕರುಣೆಯಿಂದ ತುಂಬಿದವರಾಗಿದ್ದರು. ಕಾನೂನು ಕುರಿತಾದ ಪ್ರೇಮವನ್ನು, ಪ್ರೇಮ ಕುರಿತಾದ ಕಾನೂನಿನೊಂದಿಗೆ ವಿನಿಮಯಿಸಿಕೊಳ್ಳುತ್ತಿದ್ದರು.

ಟಾಗೋರರೂ ಕೂಡ ತಮ್ಮ ತಂದೆಯ ಮನೆಯ ಸುಖವನ್ನು ತ್ಯಜಿಸಿ ರಸ್ತೆ ಬದಿಯ ಗುಡಿಸಲಿಗೆ ಬಂದರು. ಅಲ್ಲಿದ್ದುಕೊಂಡು ಪ್ರೇಮಾಮೃತ ಮತ್ತು ಜೀವರಸ ಹುದುಗಿಕೊಂಡಿರುವ ಹೃದಯುದತ್ತ ಪಯಣಿಗರು ಸಾಗಲು ಅನುವಾಗುವಂತೆ ಕತ್ತಲಲ್ಲಿ ದೀಪವನ್ನು ಎತ್ತಿ ಹಿಡಿದರು.

ನಕ್ಷತ್ರಗಳು ಗಾಂಧೀಜಿಯವರ ಕಿವಿಯಲ್ಲಿ "ನಮ್ಮೊಂದಿಗೆ ಶ್ರಮಿಸಲು ಮೇಲೆ ಬಾ" ಎಂದು ಪಿಸುಗುಟ್ಟಿದವು.

ಟಾಗೋರರು ನಕ್ಷತ್ರಗಳಿಗೆ "ನಮ್ಮೊಂದಿಗೆ ಆಟವಾಡಲು ಕೆಳಗಿಳಿದು ಬನ್ನಿ" ಎಂದು ಕೂಗಿದರು.

ಗಾಂಧೀಜಿಗೆ ತನ್ನ ಸಹೋದರನ ಕಣ್ಣಿಲ್ಲಿಯ ಮುತ್ತಿನಂಥ ಕಣ್ಣೀರು ತಮ್ಮ ಸ್ವಂತ ಆತ್ಮ ತೃಪ್ತಿ ಮತ್ತು ಸುಖಕ್ಕೊಂದು ಆಹ್ವಾನವೆಂದು ಬಗೆದಿದ್ದರು. ಟಾಗೋರರಿಗೆ ದಾರಿಹೋಕನ ಬಾಗಿದ ಬೆನ್ನು ತಮ್ಮ ಸಂಗೀತದ ತಿಂಗಳ ಬೆಳಕಿನ ಮತ್ತು ಸಮ್ಮೋಹತೆಗೆ ಆಹ್ವಾನವೆಂದು ಬಗೆದಿದ್ದರು. ಹೀಗೆ ಅವರಿಬ್ಬರ ಜೀವನ ಪ್ರೇಮ, ಶ್ರಮ ಮತ್ತು ಜ್ಞಾನದ ಪವಿತ್ರ ಸಂಗಮವಾಗಿತ್ತು.

(ಈ ಸರಣಿ ಮುಗಿಯಿತು.)

* * *

(ಜನಪದ ಧ್ವನಿ) ಕೈಗಾರಿಕೋದ್ಯಮಿಗಳ ಸ್ವಾರ್ಥ ಅಸಮಾನತೆಗೆ ಕಾರಣ

ಸ್ವಲ್ಪ ದಿನಗಳ ಹಿಂದೆ ನಾನು ಓದಿದ ಒಂದು ಲೇಖನ ನನ್ನ ಕಣ್ಣು ತೆರೆಸಿತು. ವರ್ಷಕ್ಕೆ ಒಂದು ಲಕ್ಷ ಕಾರುಗಳನ್ನು ಉತ್ಪಾದಿಸುವ ಗುರಿ ಹೊಂದಿರುವ ಟಾಟಾರವರಿಗೆ ಎಷ್ಟು ಎಕರೆ ಪ್ರದೇಶ ಬೇಕೆಂಬುದರ ಬಗ್ಗೆ ಯಾರೂ ಯೋಚಿಸಿಯೇ ಇಲ್ಲ. ಗುರುಗಾಂವ್‌ನಲ್ಲಿ ವರ್ಷಕ್ಕೆ ಐದು ಲಕ್ಷ ಕಾರುಗಳನ್ನು ತಯಾರಿಸುವ ಮಾರುತಿ ಸುಜುಕಿ ಮೂರು ನೂರು ಎಕರೆ ಮಾತ್ರ ಹೊಂದಿದೆ. ಪಶ್ಚಿಮ ಬಂಗಳಾದಲ್ಲಿ ಡಾ.ಬಿ.ಸಿ.ರಾಯ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಹಿಂದುಸ್ತಾನ್ ಮೋಟಾರ್ಸ್ ಕಂಪನಿಗೆ ಏಳುನೂರು ಐವತ್ತು ಎಕರೆ ಕೊಟ್ಟಿದ್ದರು. ಐವತ್ತು ವರ್ಷಗಳಾದರೂ ಈ ಕಾರ್ಖಾನೆ ಮುನ್ನೂರ ಐವತ್ತು ಎಕರೆ ಪ್ರದೇಶವನ್ನು ಮಾತ್ರ ಉಪಯೋಗಿಸಿ ಕೊಳ್ಳಲು ಸಾಧ್ಯವಾಯಿತು. ಉಳಿದ ಜಾಗದಲ್ಲಿ ಮನೆಗಳನ್ನು ಕಟ್ಟಿ ಮಾರಿದರು.

ಬಂಡವಾಳ ಹೂಡಿಕೆ, ಕೈಗಾರೀಕರಣ, ಕೈಗಾರಿಕೆಗಳ ಸ್ಥಾಪನೆ ಎಂದ ಕೂಡಲೆ ಸಾವಿರ-ಸಾವಿರಗಟ್ಟಲೆ ಸಂಬಳ ತರುವ ಉದ್ಯೋಗಾವಕಾಶಗಳು ಎಂಬ ಭ್ರಮೆ ನಮ್ಮಲ್ಲಿ ಉಂಟಾಗುತ್ತದೆ. ಆದರೆ ಭೂಮಿ, ವಸತಿ ಮತ್ತು ಇರುವ ಉದ್ಯೋಗಗಳನ್ನು ಕಳೆದುಕೊಳ್ಳುವವರ ಸಂಖ್ಯೆ ಇದಕ್ಕಿಂತ ಬಹುಪಾಲು ಹೆಚ್ಚಾಗಿರುತ್ತದೆ ಎಂಬುದನ್ನು ನಾವು ಗಮನಿಸಿವುದೇ ಇಲ್ಲ. ಪರಿಹಾರದ ಹಣ ದೊರೆತ ಕೂಡಲೆ ಕುಟುಂಬದ ಸದಸ್ಯರು ಅದನ್ನು ಹಂಚಿಕೊಂಡು ದಿಕ್ಕಾಪಾಲಾಗಿ ಹೋಗುತ್ತಾರೆ. ಬಂದ ಹಣವನ್ನು ಸುಲಭವಾಗಿ, ಶೀಘ್ರವಾಗಿ ಕಳೆದುಕೊಳ್ಳಲು ಅನೇಕಾನೇಕ ಮಾರ್ಗಗಳಿರುತ್ತವೆ.

ಕೈಗಾರಿಕೆಗಳನ್ನು ಸ್ಥಾಪಿಸಲು ನೆಲ ಜಲ ವಿದ್ಯುತ್ ತೆರಿಗೆಗಳಿಂದ ವಿನಾಯಿತಿ ಎಲ್ಲವನ್ನೂ ನಮ್ಮ ಸರ್ಕಾರದವರು ಕೊಡುತ್ತಾರೆ. ಉದ್ಯಮಿಗಳು ತಮ್ಮ ಬಂಡವಾಳಕ್ಕೆ ಎಷ್ಟು ಲಾಭ ಬರುತ್ತದೆ ಎಂಬುದನ್ನು ಮಾತ್ರ ನೋಡುತ್ತಾರೆ. ನಮ್ಮ ಸಾಧನ, ಸಂಪತ್ತುಗಳನ್ನು ಉಪಯೋಗಿಸಿಕೊಂಡು ಐಷಾರಾಮಿ ಜೀವನ ನಡೆಸುವವರಿಗೆ ಬೇಕಾದವುಗಳನ್ನು ಉತ್ಪಾದಿಸುತ್ತಾರೆಯೇ ಹೊರತು, ಸಾಮಾನ್ಯ ಮನುಷ್ಯನ ಜೀವನಕ್ಕೆ ಬೇಕಾದ ಕನಿಷ್ಟ ಅವಶ್ಯಕತೆಗಳನ್ನು ಪೂರೈಸಲು ಉಪಯೋಗಿಸುವುದಿಲ್ಲ. ಇದರಿಂದ ಬಡತನಕ್ಕಿಂತ ಭೀಕರವಾದ ಅಸಮಾನತೆ ಹೆಚ್ಚುತ್ತದೆ.

– ಎ. ವೆಂಕಟರಮಣ ಶೆಟ್ಟಿ, ಮೈಸೂರು

* * *

ವೇದದಲ್ಲಿಯ ಮುತ್ತುಗಳು

– ವಿನೋಬಾ

ತತ್ ಸೂರ್ಯಸ್ಯ ದೇವತ್ವಂ

ಸೂರ್ಯಸ್ಯ ದೇವತ್ವಂ ಮಧ್ಯಾ ಕರ್ತೋರ್ ವಿತತಂ ಸಂ ಜಭಾರ (೧೮,೧೫)

ಸೂರ್ಯನು ಹರಡಿರುವ ತನ್ನೆಲ್ಲ ಕಿರಣಗಳನ್ನು ಸಾಯಂಕಾಲದಲ್ಲಿ ಒಟ್ಟಿಗೆ ಸಂಗ್ರಹಿಸಿಕೊಳ್ಳಬಲ್ಲ. ತನ್ನಲ್ಲಿ ಕಿರಣಗಳನ್ನು ವಿಲೀನಗೊಳಿಸಬಲ್ಲ ಎಂಬುದರಲ್ಲಿಯೇ ಸೂರ್ಯನ ದೇವತ್ವ ಮತ್ತು ಮಹಿಮೆಯಿದೆ. ಸೆಳೆದುಕೊಳ್ಳುವ ಈ ಮಹಾನ್‌ಶಕ್ತಿ ಸೂರ್ಯನಲ್ಲಿದೆ. ಸಂಧ್ಯಾ ಸಮಯದಲ್ಲಿ ಯಾವ ಪ್ರಕಾರವಾಗಿ ಸೂರ್ಯನು ತನ್ನೆಲ್ಲ ಕಿರಣಗಳನ್ನು ಸೆಳೆದುಕೊಳ್ಳುತ್ತಾನೊ ಅದೇ ರೀತಿ ನಮ್ಮ ಎಲ್ಲ ಕೆಲಸಗಳನ್ನೂ ಸೆಳೆದುಕೊಳ್ಳುವ ಶಕ್ತಿ ನಮ್ಮಲ್ಲಿ ಕೂಡ ಇರಬೇಕು.

"ಹೇ ಸೂರ್ಯ ನಾರಾಯಣನೇ, ನಿನ್ನದೆಂಥ ಅದ್ಭುತ ಮಹಿಮೆ! ಸಾಯಂಕಾಲದಲ್ಲಿ ಕಿರಣಗಳೆಲ್ಲ ಹರಡಿದ್ದವು. ಐದ್ಹತ್ತು ನಿಮಿಷಗಳಲ್ಲಿ ಅವುಗಳನ್ನು ಸೆಳೆದುಕೊಂಡೆ." ಋಷಿಗೆ ಇದೊಂದು ಚಮತ್ಕಾರವಾಗಿ ಕಂಡು ಹರಡಿದ ಕಿರಣಗಳ ಜಾಲವನ್ನು ಒಮ್ಮೆಲೆ ಹೇಗೆ ಸೆಳೆದುಕೊಂಡ ಮತ್ತು ನೋಡು ನೋಡುತ್ತಿರುವಾಗಲೇ ಹೇಗೆ ಕತ್ತಲೆಯಾಯಿತು ಎಂದು ಋಷಿ ಅಂದುಕೊಳ್ಳುತ್ತಾನೆ. ಆದ್ದರಿಂದ ಸೂರ್ಯನಾರಾಯಣನದು ಬಹು ದೊಡ್ಡ ಮಹಿಮೆಯಿದೆ. ನಾವು ಪಾಮರರು. ನಾವೇನಾದರೂ ನಮ್ಮ ಕೆಲಸವನ್ನು ವಿಸ್ತರಿಸುತ್ತಾ ಹೋದರೆ ನಮ್ಮಿಂದ ಒಟ್ಟುಗೂಡಿಸಲು ಸಾಧ್ಯವಾಗುವುದಿಲ್ಲ. ಜೇಡರ ಬಲೆಯ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡಂತೆ ಸಿಕ್ಕಿಹಾಕಿಕೊಳ್ಳುವೆವು, ನಂತರ ಬಿಡಿಸಿಕೊಳ್ಳಲಾರೆವು. ಸೆಳೆದುಕೊಳ್ಳುವ ಈ ಶಕ್ತಿಯು ಪ್ರವಾಹ ಪತಿತ ಮುಖಂಡರಲ್ಲಿ ಮತ್ತು ಕಾರ್ಯಕರ್ತರಲ್ಲಿ ಇರುವುದು ಕಂಡು ಬರುವುದಿಲ್ಲ. ಅವರು ಚಲ್ಲಾಪಿಲ್ಲಿಯಾಗಿರುತ್ತಾರೆ. ಹಿಂದಿರುಗಿ ಸ್ವ ಸ್ಥಾನಕ್ಕೆ ಬರಲು ಸಾಧ್ಯವಿಲ್ಲ. ಅವರು ಕೆಲಸದ ಹಿಂದೆಯೇ ಹೋಗಬೇಕಾಗುತ್ತದೆ. ಅವರು ಕರ್ಮಸ್ವಾಮಿ ಆಗಿರುವುದಿಲ್ಲ, ಕರ್ಮದಾಸರೇ ಆಗಿಬಿಡುತ್ತಾರೆ. ಈ ಕಾರಣದಿಂದಾಗಿ ಕರ್ಮದಲ್ಲಿರುವ ದೋಷಗಳನ್ನು ಅವರು ತಟಸ್ಥ ರೂಪದಲ್ಲಿ ನೋಡಲಾರರು. ಇದರ ಪರಿಣಾಮವಾಗಿ ಅವರು ಬಯಸುವ ರೀತಿಯಲ್ಲಿ ಕೆಲಸವಾಗುವುದಿಲ್ಲ. ಆಂದೋಲನವನ್ನು ಪ್ರಾರಂಭಿಸುವುದೇನೋ ಸುಲಭ, ಆದರೆ ಅದನ್ನು ಹಿಂದಕ್ಕೆಳೆದುಕೊಳ್ಳುವುದು ಸುಲಭದ ಮತ್ತು ಸಾಧಾರಣ ಸಂಗತಿಯಲ್ಲ. ಆಂದೋಲನವನ್ನು ಪ್ರಾರಂಭಿಸಿ ಮತ್ತು ಅದನ್ನು ಹಿಂದಕ್ಕೆ ಪಡೆಯುವ ಸಾಮರ್ಥ್ಯವುಳ್ಳ ಮಹಾಪುರುಷರು ವಿರಳ, ಗಾಂಧೀಜಿಯವರಲ್ಲಿ ಎಳೆದುಕೊಳ್ಳುವ ಶಕ್ತಿಯಿತ್ತು. ಅದು ಅಸಾಧಾರಣವಾಗಿತ್ತು. ಸೂರ್ಯ ತನ್ನ ಕಿರಣಗಳನ್ನು ತೆರೆಯುತ್ತಾನೆ ಮತ್ತು ಹಿಂದಕ್ಕೂ ಸೆಳೆದುಕೊಳ್ಳುತ್ತಾನೆ. ಆದ್ದರಿಂದ ತನ್ನ ಕರ್ಮದಂದ ಸ್ವಲ್ಪ ಹೊತ್ತು ಅಲಿಪ್ತನಾಗಿದ್ದು ಆಂತರಿಕ ಚಿಂತನೆ

ಮಾಡುವುದು ಆತ್ಮದಲ್ಲಿ ಸ್ಥಿರವಾಗಿರುವುದು ಮತ್ತು ಕರ್ಮದ ಕಡೆಗೆ ತಟಸ್ಥತೆಯಿಂದ ನೋಡುವುದು ಇದೆಲ್ಲವು ಕರ್ಮದ ಶುದ್ಧಿಗಾಗಿ, ಪುಷ್ಟಿಗಾಗಿ ಮತ್ತು ವೃದ್ಧಿಗಾಗಿಯೂ ಕೂಡ ಅಗತ್ಯವಾಗಿದೆ. ನಮ್ಮ ಮನಸ್ಸಿನ ಶುದ್ಧಿಗಾಗಿ ಅದರ ಅವಶ್ಯಕತೆಯಂತೂ ಇದ್ದೇ ಇದೆ. ಈ ಕಾರಣದಿಂದ ಮಧ್ಯೆ ಮಧ್ಯೆ ಅತ್ಮಶೋಧನೆಯನ್ನು ಮಾಡಬೇಕು.

ಅಚಿತ್ತಂ ಬ್ರಹ್ಮ

ಅಚಿತ್ತಂ ಬ್ರಹ್ಮ ಜುಜುಷುರ್ಯುರ್ವಾನಃ

ಯಾವ ಬ್ರಹ್ಮನ ಚಿಂತನೆ ಎಂದೂ ಯಾರೂ ಮಾಡಿಲ್ಲವೊ ಅಂಥ ಬ್ರಹ್ಮನ ಚಿಂತನೆ ಮಾಡುವುದು ಯುವಕರಿಗೆ ಒಳ್ಳೆಯದೆನ್ನಿಸುತ್ತದೆ, ಯಾರ ವಿಷಯವಾಗಿ ಮೊದಲು ಚಿಂತನೆ ನಡೆದಿದೆಯೊ ಅದರ ಆಕರ್ಷಣೆ ಇರುವುದಿಲ್ಲ. ಒಂದು ವೇಳೆ ಜೀರ್ಣಗೊಂಡ ಬ್ರಹ್ಮನನ್ನು ಯುವಕರ ಎದುರಿನಲ್ಲಿ ಇಟ್ಟರೆ ಅವನು ಬ್ರಹ್ಮನಾಗಿದ್ದರೂ ಕೂಡ ಹೊಸ ಪೀಳಿಗೆಯವರಿಗೆ ಅವನ ಬಗ್ಗೆ ಸ್ವಲ್ಪವೂ ಆಕರ್ಷಣೆ ಉಂಟಾಗುವುದಿಲ್ಲ. ಇದನ್ನು ಯುವಕರ ದೋಷವೆಂದು ತಿಳಿಯಲಾಗುವುದಿಲ್ಲ ಯುವಕರಿಗೆ ಹೊಸ ಕಲ್ಪನೆ ಬೇಕು. ಇದು ಉಚಿತವೂ ಕೂಡ. ಹೊಸ ಜನರಿದ್ದಾರೆ, ಹಳೆಯ ಕಲ್ಪನೆಯಿದ್ದರೆ ಯುವಕರಿಗೆ ಹೇಗೆ ತಾನೆ ಸಂತೋಷವಾಗಬಲ್ಲದು? ಆದ್ದರಿಂದ ಸಮಾಜದಲ್ಲಿ ನಿತ್ಯವೂ ಹೊಸ ತತ್ವ ಪ್ರಕಟಗೊಳ್ಳಬೇಕು. ಆದರೆ ಈ ಸಂಸಾರದಲ್ಲಿ ಒಮ್ಮೆಲೆ ಹೊಸದೇನಿದೆ? ಸನಾತನ ಸತ್ಯ ಹಳೆಯದಾಗಿಯೇ ಇರುತ್ತವೆ. ಆದರೆ ಅವು ಹೊಸ ರೂಪ, ಹೊಸ ವೇಷ ಧರಿಸಿ ಬರಲು ಸಾಧ್ಯ. ಈ ಪ್ರಕಾರ ಅವು ಹೊಸದಾಗುತ್ತವೆ. ಸನಾತನ ರೂಪಧಾರಿಣಿ ಶಕ್ತಿಯೇ ಸನಾತನ ಸತ್ಯದ ಸನಾತನತೆ. ಈ ಕಾರಣದಿಂದಲೇ ಅವು ಚಿರಸ್ಥಾಯಿ.

ಯಾಸ್ಕಾಚಾರ್ಯ ಸನಾತನ ಧರ್ಮದ ವ್ಯಾಖ್ಯೆ ಮಾಡಿದ್ದಾನೆ – ಸನಾತನ 'ನಿತ್ಯ ನೂತನ:–

ಯಾವುದು ನಿತ್ಯ ಹೊಸ ರೂಪವನ್ನು ಧರಿಸಬಲ್ಲದೋ ಅದು ಸನಾತನ ಧರ್ಮ. ಇಂದು "ಸನಾತನ ಧರ್ಮ"ಅಂದರೆ ಹಳೆಯ ಧರ್ಮ ಎಂದು ತಿಳಿಯಲಾಗುತ್ತದೆ. ಆದರೆ ಯಾವ ಧರ್ಮ ಹಳೆಯ ರೂಪವನ್ನೇ ಇಟ್ಟುಕೊಳ್ಳಲು ಬಯಸುತ್ತದೋ ಅದನ್ನು ಸನಾತನ ಧರ್ಮವೆಂದು ಕರೆಯಲಾಗದು. ಸನಾತನ ಧರ್ಮದ ಅರ್ಥ ಅದ್ಯತನ ಧರ್ಮ. ಇಂದಿನ ಧರ್ಮ. ಯಾವುದರಲ್ಲಿ ಈ ಕಾಲದ ರೂಪ ಮತ್ತು ತೇಜವಿದೆಯೋ, ಆ ಯುಗ ಧರ್ಮವೇ ಸನಾತನ ಧರ್ಮ.

ಅಯಂ ಯಜ್ಞೋ ಭುವನಸ್ಯ ನಾಭಿಃ.

ಯಾರೋ ಒಬ್ಬರು ವೈದಿಕ ಋಷಿಗೆ **ಪೃಚ್ಛಾಮಿ ತ್ವಾ ಪರಮತಂ ಪೃಥಿವ್ಯಾಃ ಪೃಚ್ಛಾಮಿ ಯತ್ರ ಭುವನಸ್ಯ ನಾಭಿಃ** (೧,೨೩,೧೧) ಎಂದು ಯರೋ ಒಬ್ಬರು ಕೇಳಿದರು ಪೃಥ್ವಿಯ ಅಂತ ಎಲ್ಲಿದೆ? ತ್ರಿಭುವನದ ಕೇಂದ್ರ ನಾಭಿ ಎಲ್ಲಿದೆ? ಆಗ ವೀರನಾದ ಋಷಿ

ನೇರವಾದ ಉತ್ತರವನ್ನು ಕೊಟ್ಟ–**ಇಯಂ ವೇದಿಃ ಪರೋ ಅಂತಃ ಪೃಥಿವ್ಯಾಃ ಅಯಂ ಯಜ್ಞೋಭುವನಸ್ಯ ನಾಭಿಃ (೧,೨೩,೧೧)** ಈ ನನ್ನ ಯಜ್ಞ ತ್ರಿಭುವನದ ಕೇಂದ್ರ ಬಿಂದು. ಮತ್ತು ಈ ಯಜ್ಞದ ಭೂಮಿ ಎಲ್ಲಿಂದ ನನಗೆ ಜ್ಞಾನ ದೊರೆತಿದೆಯೋ ಅದು. ಸಂಪೂರ್ಣ ಪೃಥ್ವಿಯ ಅಂತ. ಋಷಿ ಯಜ್ಞ ಮಾಡುತ್ತಿದ್ದ ಯಜ್ಞಕ್ಕಾಗಿ ಒಂದು ವೇದಿಯನ್ನು ಮಾಡಲಾಗಿತ್ತು. ಋಷಿ ಹೇಳಿದ ಇಡೀ ಪೃಥ್ವಿಯ ಅಂತ ಸ್ಥಾನ ಈ ವೇದಿ ಮತ್ತು ಈ ಯಜ್ಞ ಇಡೀ ವಿಶ್ವದ ಕೇಂದ್ರ ಬಿಂದು.

ಹೀಗೆಂದು ಯಾವಾಗ ಮನುಷ್ಯ ತಿಳಿಯುತ್ತಾನೊ ಅಗ ಜೀವನದ ಉದ್ದೇಶ ಯಜ್ಞವಾಗಿ ಬಿಡುತ್ತದೆ ಮತ್ತು ಅದು ಪವಿತ್ರವಾಗುತ್ತದೆ. ನಾವು ಎಲ್ಲಿ ಕೆಲಸ ಮಾಡುತ್ತೇವೋ ಆ ಸ್ಥಾನ ಪವಿತ್ರವಲ್ಲವೆಂದು ಭಾವಿಸಿದರೆ ಈಶ್ವರ ದರ್ಶನದ ಬೀಗದ ಕೈ ಕಳೆದುಕೊಳ್ಳುವೆವು. ಎಲ್ಲಿ ನನ್ನ ಜನ್ಮವಾಗಿದೆಯೋ ಮತ್ತು ಸೇವೆಯ ಬುದ್ಧಿ ದೊರೆತಿದೆಯೋ ಅ ಸ್ಥಾನವೇ ತ್ರಿಭುವನದಲ್ಲಿ ಅಧಿಕಾಧಿಕ ಪವಿತ್ರವಿದೆ ಎಂದು ಅನುಭೂತಿ ಅಗುವುದೋ ಆಗ ಪರಮೇಶ್ವರ ದರ್ಶನದ ಬೀಗದ ಕೈ ಕೈಗೆ ದೊರೆಯುವುದು. ಆದರೆ ನಾವೆಲ್ಲಿ ಇರುತ್ತೇವೆಯೋ ಅದೇ ಪವಿತ್ರ ಸ್ಥಾನ. ಬೇರೆಯದು ಅಲ್ಲ ಎಂದು ಹೇಳಿದರೆ ಅದು ತಪ್ಪು. ಹಾಗೇನಾದರೂ ತಿಳಿದಲ್ಲಿ ನಾವು ಜೀವನವನ್ನೇ ಕಳೆದುಕೊಂಡು ಬಿಡುತ್ತೇವೆ. ಎಲ್ಲಿ ನಾವು ಇರುತ್ತೇವೆಯೋ ಅಲ್ಲಿಯೇ ನಮ್ಮ ಜೀವನದ ಸೂತ್ರ ನಮ್ಮ ಕೈಗೆ ಬರಬೇಕು.

ಋಚೊ ಅಕ್ಷರೆ

"ಋಗ್ವೇದದಗಳ ಮೊದಲ ಮಂಡಲದಲ್ಲಿ ದೀರ್ಘತಮಸ್ ಋಷಿಯ ಮಂತ್ರವಿದೆ.

"ಋಚೊ ಅಕ್ಷರೆ ಪರಮೆ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವವೆ ನಿಷೇದುಃ"
ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಇತ್ ತದ್ ವಿದುಸ್ತ ಇಮೇ ಸಮಾಸತೆ (೧.೨೩.೧೨)

ವೇದಗಳ ಎಲ್ಲ ಋಚುಗಳು ಅಂದರೆ ವೇದ ಮಂತ್ರಗಳು ಒಂದು ಅಕ್ಷರದ, ಮತ್ತು ಒಂದು ದೇವರ ಹೆಸರಿನಲ್ಲಿ ಹೃದಯದ ಪರಮ ಆಕಾಶದಲ್ಲಿ ಅಡಗಿ ಕೂತಿವೆ. ಅದನ್ನು ಯಾರು ತಿಳಿಯುವುದಿಲ್ಲವೊ ಅವರು ವೇದಗಳ ಮಂತ್ರ ತೆಗೆದುಕೊಂಡು ಏನು ಮಾಡುವರು? ಆ ಅಕ್ಷರವನ್ನು ಓಂ ಎಂದು ತಿಳಿಯಲಾಯಿತು. ಅದೇ ಎಲ್ಲರಲ್ಲಿ ರಮಿಸುವ ರಾಮ.

ಸಾಹಿತ್ಯದಲ್ಲಿ ನಮಗೆ ನಾಮಾನುಭೂತಿಯ ಮೊದಲನೆಯ ಯಾವ ಉದ್ಗಾರ ಸಿಗುತ್ತದೋ ಅದು ವೇದದಲ್ಲಿದೆ. ಋಗ್ವೇದದಲ್ಲಿ 'ನಾಮ' ಎಂಬುದು ನೂರಾರು ಸಲ ಬಂದಿರಬಹುದು. ಆದರೆ ಇಡೀ ವೇದದ ಸಾರ ಪರಮೇಶ್ವರನ ನಾಮವೇ ಆಗಿದೆ. ಉಪನಿಷತ್ತುಗಳು ಹೀಗೆ ಘೋಷಣೆ ಮಾಡಿವೆ – **ಸರ್ವೇ ವೇದಾಯತ್ ಪದಂ** ಆಮಂತಿ. ಎಲ್ಲ ವೇದಗಳು ಈಶ್ವರನ ನಾಮವನ್ನೇ ಮನನ ಮಾಡುತ್ತವೆ. ಈ ಕಾರಣದಿಂದಾಗಿಯೇ

ವೇದಗಳಿಗೆ ಆಮ್ನಾಯ ಅಂದರೆ ಪರಮೇಶ್ವರನ ನಾಮವನ್ನು ಆ ಮನನ ಮಾಡುವಂತಹದ್ದು ಎಂಬ ಸಂಜ್ಞೆ ಬಂದಿದೆ. ಆಮನನ ಎಂದರೆ ವಿಸ್ತೃತ ಮನನ.

ಅಂದರೆ ಎಲ್ಲಿಯವರೆಗೆ ಪರಮ ಅಕ್ಷರದ ಜ್ಞಾನವಾಗಿಲ್ಲವೊ ಅಲ್ಲಿಯವರೆಗೆ ವೇದಗಳ ಆಧಾರ ತೆಗೆದುಕೊಳ್ಳಬೇಕು. ಯಾವ ಪರಮ ಅಕ್ಷರದ ಆಧಾರದ ಮೇಲೆ ವೇದಗಳು ನಿಂತಿವೆಯೋ ಅದನ್ನೆ ಹೊಂದಿದ್ದರೆ ವೇದಗಳನ್ನು ತೆಗೆದುಕೊಂಡು ಏನು ಮಾಡುವಿರಿ. ಒಂದು ವೇಳೆ ಅದನ್ನು ಹೊಂದಿದ್ದರೆ ಸ್ವಾಭಾವಿಕವಾಗಿಯೇ ವೇದಗಳ ಅವಶ್ಯಕತೆ ಸಮಾಪ್ತವಾಗುತ್ತದೆ. ಈ ಮಂತ್ರ ಶ್ವೇತಾಶ್ವರೋಪ ಉಪನಿಷತ್‌ನಲ್ಲಿಯೂ ಕೂಡ ಸಮ್ಮಿಲಿತವಾಗಿದೆ.

ಅಸ್ಯವಾಮೀಯ ಸೂಕ್ತ

ಅಸ್ಯವಾಮೀಯ ಸೂಕ್ತ ಋಗ್ವೇದದ ಪ್ರಥಮ ಮಂಡಲದಲ್ಲಿ ಬಂದಿದೆ. ಇದು ಬಹಳ ಪ್ರಸಿದ್ಧ ಸೂಕ್ತ. ವೇದದ ಎಲ್ಲಕ್ಕಿಂತ ದೊಡ್ಡ ಸೂಕ್ತವಾಗಿದೆ. ಇದರಲ್ಲಿ ಐವತ್ತಾರು ಮಂತ್ರಗಳಿವೆ. ಈ ಸೂಕ್ತವನ್ನು ಸಂಕ್ಷೇಪವಾಗಿ ವಾಮನ ಅಥವಾ ಅಸ್ಯವಾಮೀಯ ಎಂದು ಹೇಳುತ್ತಾರೆ. ಏಕೆಂದರೆ ಈ ಮಂತ್ರದ ಆರಂಭ ಅಸ್ಯವಾಮಸ್ಯ ಎಂದಿದೆ. ಇದು ಒಂದು ಗೂಢ ಅಧ್ಯಾತ್ಮ ವಿದ್ಯೆಯಿಂದ ತುಂಬಿದ ಸೂಕ್ತವಾಗಿದೆ. ಹಾಗೆ ನೋಡಿದರೆ ಇಡೀ ವೇದವೆ ಅಧ್ಯಾತ್ಮ ವಿದ್ಯೆಯಿಂದ ತುಂಬಿದೆ. ಆದರೆ ಕೆಲವು ಸೂಕ್ತಗಳಲ್ಲಿ ಸಾಮಾನ್ಯ ಭಕ್ತಿಯ ಹೊರತಾಗಿ ಬ್ರಹ್ಮವಿದ್ಯೆಯನ್ನು ಕೂಡ ಪ್ರಕಟಗೊಳಿಸುವ ಪ್ರಯತ್ನವಾಗಿದೆ. ಈ ಸೂಕ್ತದ ಅನೇಕ ಮಂತ್ರಗಳು ಉಪನಿಷತ್ತುಗಳ ಉದ್ಧರಣದ ರೀತಿಯಲ್ಲಿ ಪ್ರತಿಪಾದ್ಯ ವಿಷಯದ ಪುಷ್ಟಿಗಾಗಿ ಬಂದಿವೆ. ನನ್ನ ಸ್ವಂತ ಗ್ರಹಿಕೆ ಏನು ಅಂದರೆ ಗೀತೆಯ ೧೩ನೇ ಅಧ್ಯಾಯದಲ್ಲಿ ಕ್ಷೇತ್ರ-ಕ್ಷೇತ್ರಜ್ಞ ಕುರಿತು ತಿಳಿಸಲಾಗಿರುವ **ಋಷಿಭಿರ್ ಬಹುದಾ ಗೀತಂ ಚಂದೋಭಿರ್ ವಿವಿಧೈಃ ಪೃತಕ್ ಬ್ರಹ್ಮ ಸೂತ್ರ ಪದಶ್ಚೈವ** ..(ಗೀತಾ. ೧೩.೪) ಈ ಉಲ್ಲೇಖ ವೇದಗಳಿಗಾಗಿ ಬಂದಿದೆ ಎಂದು ಅನಿಸಿತು. ಅದರಲ್ಲಿ ಒಂದು ಮಹತ್ವದ ಮಂತ್ರ ಬಂದಿದೆ. ಋಚೊ ಅಕ್ಷರೆ ಪರಮೇ ವ್ಯೋಮನ್ ಎಷ್ಟು ಋಚಗಳಿವೆಯೊ ಅವು ಒಂದು ಅಕ್ಷರದಲ್ಲಿ ಅಧಿಷ್ಠಿತವಾಗಿವೆ. ಯಾರು ಈ ಒಂದು ಅಕ್ಷರವನ್ನು ಒಪ್ಪಿಕೊಳ್ಳುವುದಿಲ್ಲವೊ ಅವರು ಎಲ್ಲ ಋಚಗಳನ್ನು ತಿಳಿದುಕೊಂಡು ಏನು ಮಾಡುವರು. ಬೇರೆ ಋಚಗಳು ಕಂಠಸ್ತವಾಗಿದ್ದರೂ ಏನು ಲಾಭ?

ಎರಡನೆಯ ಇನ್ನೊಂದು ಮಂತ್ರವಿದೆ - **ಯಜ್ಞೇನ ಯಜ್ಞ ಮಯ ಜಂತ** (೧.೭೩.೧೯) ಈ ಋಚೆ ಪುರುಷ ಸೂಕ್ತದಲ್ಲಿ ಕೂಡ ಬಂದಿದೆ. ಈ ಋಚ ಋಗ್ವೇದದಲ್ಲಿ ಎರಡು ಬಾರಿ - ಒಂದು ಸಲ ಪ್ರಥಮಮಂಡಲದಲ್ಲಿ ಎರಡನೆ ಸಲ ದಶಮ ಮಂಡಲದಲ್ಲಿ ಬಂದಿದೆ. ಇವುಗಳಲ್ಲದೆ ಇನ್ನೂ ಎಷ್ಟೋ ಪ್ರಸಿದ್ಧ ಮಂತ್ರಗಳು ಈ ಸೂಕ್ತದಲ್ಲಿವೆ. ವಾಣಿಯ ಶೋಧನೆ ಯೋಗಾವಿದ್ಯೆ ಇತ್ಯಾದ ವಿಷಯಗಳು ಗೂಢ ಭಾಷೆಯಲ್ಲಿ ಮತ್ತು

ರೂಪಕಗಳ ಶೈಲಿಯಲ್ಲಿ ಮಂಡಿಸಲಾಗಿದೆ.

ಇವುಗಳಲ್ಲಿ ಒಂದು ಬಹು ಪ್ರಸಿದ್ಧ ಮಂತ್ರ – **ಏಕಂ ಸದ್ ವಿಪ್ರಾಬಹುದಾ ವದಂತಿ ಅಗ್ನಿ ಯಮಂ ಮಾತಾರಿಶ್ವಾಮಾಹುಃ** (೧.೨೩.೧೬) ಇದರರ್ಥ ಸತ್ ಒಂದೇ ಆಗಿದೆ. ಉಪಾಸನೆಗಾಗಿ ಉಪಾಸಕರು ಭಿನ್ನ ಭಿನ್ನ ರೂಪಗಳನ್ನು ಇಷ್ಟ ಪಡುತ್ತಾರೆ. ಅಗ್ನಿ, ಯಮ, ಮಾತರಿಶ್ವಾ ಅಂದರೆ ವಾಯು ಈ ಎಲ್ಲವೂ ಒಬ್ಬನೇ ಪರಮೇಶ್ವರನ ಭಿನ್ನ ಭಿನ್ನ ಗುಣವಾಚಕ, ಭಿನ್ನ ಭಿನ್ನ ಹೆಸರುಗಳು. ಪರಮೇಶ್ವರ ಪರಿಶುದ್ಧ ನಿರ್ಗುಣನಿದ್ದಾನೆ. ಅಂದರೆ ಅನಂತ ಗುಣವಂತ. ಉಪಾಸಕನು ತನ್ನಲ್ಲಿ ಯಾವ ಗುಣದ ವಿಕಾಸದ ಅವಶ್ಯಕತೆ ಅನುಭವವಾಗುತ್ತದೊ ಅವನು ಆ ಗುಣಗಳುಳ್ಳ ಭಗವಂತನ ಭಕ್ತಿ ಮಾಡುತ್ತಾನೆ. ಕೆಲವು ಕಡೆ ಇಂದ್ರನ ಉಪಾಸನೆ ಇದೆ. ಇನ್ನು ಕೆಲವೆಡೆ ಯಮನ, ಅಗ್ನಿಯ, ಕರುಣೆಯ ಉಪಾಸನೆಯಿದೆ. ಯಾವುದೇ ಒಂದು ಗುಣದ ಉಪಾಸನೆಯನ್ನು ಮಾಡಿದಾಗಲೂ ಬೇರೆಲ್ಲ ಗುಣಗಳ ಉಪಾಸನೆಯನ್ನು ಅದರಲ್ಲೆ ಸಮಾಹಿತ ಮಾಡಲಾಗಿದೆ. ಅಗ್ನಿಯ ಸ್ತುತಿ ಮಾಡುವ ಸಮಯದಲ್ಲಿ ನಿನ್ನಲ್ಲಿ ಇಂದ್ರ, ವರುಣ, ಯಮ ಈ ಎಲ್ಲವೂ ವಿದ್ಯಮಾನವಾಗಿವೆ ಎಂದು ಉಪಾಸನೆ ಮಾಡುತ್ತಾನೆ. ಇದೇ ಪ್ರಕಾರ ಇಂದ್ರನ ಉಪಾಸನೆ ಮಾಡಲಾಗಿದೆ. ಆಗ ಉಳಿದೆಲ್ಲ ದೇವಗಣ ಅದರಲ್ಲಿಯೇ ಅಂತರ್ಗತವೆಂದು ಹೇಳಲಾಗಿದೆ. ಸೂರ್ಯನ ಸ್ತುತಿಯಲ್ಲಿ ಸವಿತಾ ಪ್ರಸವಿತಾ ಅಂದರೆ ಪ್ರೇರಣೆ ಕೊಡುವವ ಎಂದು ಹೇಳಲಾಗಿದೆ. ಈ ಉಷೆ ಎಲ್ಲರನ್ನೂ ಎಚ್ಚರಗೊಳಿಸುತ್ತಿದ್ದಾಳೆ. ಎಚ್ಚರಗೊಂಡ ಮನುಷ್ಯರು ಸಂಸಾರದ ಕಾರ್ಯಗಳಲ್ಲಿ ತೊಡಗುವರು. ಭಗವಂತನ ಒಂದು ಅಂಶ ಹಿಡಿದುಕೊಂಡೆ ಅವನ ಸ್ಪರ್ಶವನ್ನು ಮಾಡಬಹುದು, ಅವನ ಪೂರ್ಣ ದರ್ಶನ ಮಾಡಬಹುದು. ಭಿನ್ನ ಭಿನ್ನ ದೇವಗಣಗಳು ಒಬ್ಬನೇ ಪರಮಾತ್ಮನ ಭಿನ್ನ ಭಿನ್ನ ವಿಭೂತಿಗಳು.

ಪರಮೇಶ್ವರ ಒಬ್ಬನಾಗಿದ್ದರೂ ಕೂಡ ಉಪಾಸಕರು ಅವನಿಗೆ ಬಹುವಿಧವಾದ ಹೆಸರುಗಳನ್ನು ಕೊಟ್ಟಿದ್ದಾರೆ. ಇಡೀ ಪರಮೇಶ್ವರ ಒಂದೇ ಅಭಿವ್ಯಕ್ತಿಯಲ್ಲಿ ಸೇರಲು ಅವಕಾಶವಿಲ್ಲ. ಆದ್ದರಿಂದ ಮೊದಲು ಪರಮಾತ್ಮನ ಭಿನ್ನ ಭಿನ್ನ ಅಭಿವ್ಯಕ್ತಿಗಳನ್ನು ವಿಶ್ಲೇಷಣೆ ಮಾಡಿ ನಂತರ ಅವೆಲ್ಲವುಗಳ ಸಂಶ್ಲೇಷಣೆ ಮಾಡುವುದು ಮತ್ತು ಕೊನೆಯಲ್ಲಿ ಅದಕ್ಕೂ ಮುಂದೆ ಹೋಗಿ ಸೋಹಮಸ್ಮಿ ಎಂಬ ಅನುಭವದಲ್ಲಿ ಲೀನವಾಗಬೇಕಿದೆ.

(ಮುಂದುವರಿಯುವುದು...)

* * *

ಯಾವುದೇ ಅಧಿಕಾರ ಸ್ಥಾನ ಬಯಸದ ಸ್ವಾತಂತ್ರ್ಯ ಯೋಧರು

- ಸತ್ಯವ್ರತ

ಆಚಾರ್ಯ ಜೆ.ಬಿ. ಕೃಪಲಾನಿ (೧೮೮೮–೧೯೮೨)

ಕರಾಚಿ ಕಾಲೇಜಿನ ಮುಷ್ಕರವೊಂದರಲ್ಲಿ ಭಾವವಹಿಸಿದರೆಂಬ ಕಾರಣದಿಂದ ಅವರನ್ನು ಕಾಲೇಜಿನಿಂದ ಹೊರಹಾಕಲಾಯಿತು. ೧೯೧೨–೧೯೧೭ರ ವರೆಗೆ ಮುಜಫರ್‌ಪುರ ಕಾಲೇಜಿನಲ್ಲಿ ಅನಂತರ ೧೯೧೯–೧೯೨೦ರ ವರೆಗೆ ಬನಾರಸ್‌ಹಿಂದೂ ವಿಶ್ವವಿದ್ಯಾಲಯದಲ್ಲಿ ಮತ್ತು ಕೆಲವು ವರ್ಷ ಗಾಂಧೀಜಿ ಸ್ಥಾಪಿಸಿದ ಗುಜರಾತ್ ವಿದ್ಯಾಪೀಠದಲ್ಲಿ ಪ್ರಾಚಾರ್ಯರಾಗಿ ಕಾರ್ಯ ಮಾಡಿದರು. ಮುಜಫರ್‌ಪುರದ ಕಾಲೇಜ್ ಶಿಕ್ಷಕರಾಗಿದ್ದಾಗಲೇ ಗಾಂಧೀಜಿಯವರ ಚಂಪಾರಣ್ಯ ಸತ್ಯಾಗ್ರಹದಲ್ಲಿ ದುಡಿದರು. ೧೯೨೭ರಿಂದ ರಚನಾತ್ಮಕ ಕಾರ್ಯ ಮತ್ತು ಕಾಂಗ್ರೆಸ್‌ಗಾಗಿ ಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡರು. ೧೯೩೪ರಿಂದ ೧೯೪೬ ಕಾಂಗ್ರೆಸ್ ಜನರಲ್ ಸೆಕ್ರೆಟರಿಯ ಜವಾಬ್ದಾರಿಯನ್ನು ನಿರ್ವಹಿಸಿದರು. ೧೯೨೦–೨೧ರ ಅಸಹಕಾರ ಚಳುವಳಿ, ೧೯೩೦ರ ಉಪ್ಪಿನ ಸತ್ಯಾಗ್ರಹ ಮತ್ತು ೧೯೪೨ರ ಭಾರತ ಬಿಟ್ಟು ತೊಲಗಿ ಆಂದೋಲನಗಳಲ್ಲಿ ಭಾಗವಹಿಸಿ ಪ್ರತಿಸಾರಿಯೂ ದೀರ್ಘಾವಧಿ ಸೆರೆವಾಸ ಅನುಭವಿಸಿದರು. ೧೯೪೬ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟು ಭಿನ್ನಾಭಿಪ್ರಾಯಗಳು ಬೆಳೆದ ಕಾರಣ ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟರು. ೧೯೫೧ರಲ್ಲಿ ಕಾಂಗ್ರಸ್ಸನ್ನು ಸಂಪೂರ್ಣವಾಗಿ ತ್ಯಜಿಸಿದರು. ಕೆ.ಎಂ.ಪಿ.ಪಿ ಪಕ್ಷ ಕಟ್ಟಿದರು. 'ವಿಜಿಲ್' ಎಂಬ ಪತ್ರಿಕೆ ಆರಂಭಿಸಿ ಅದರ ಸಂಪಾದಕರಾಗಿ ದುಡಿದರು. ಅವರ ಪಕ್ಷ ಸಮಾಜವಾದಿ ಪಕ್ಷದೊಡನೆ ವಿಲೀನವಾಗಿ ಹೊಸದೇ ಆದ ಪ್ರಜಾ ಸಮಾಜವಾದಿ ಪಕ್ಷ ಉದಯಿಸಿತು. ೧೯೫೪ರಲ್ಲಿ ಅದರಿಂದಲೂ ಹೊರಬಂದರು. ಅವರು ಅನೇಕ ಅವಧಿಗಳ ಕಾಲ ಲೋಕಸಭಾ ಸದಸ್ಯರಾಗಿದ್ದರು.

ಲಾಲಾ ಲಜಪತ್‌ರಾಯ್ (೧೮೮೫–೧೯೨೮)

ಅಸಾರ್ ಮತ್ತು ಲಾಹೋರ್‌ಗಳಲ್ಲಿ ವಕೀಲರಾಗಿದ್ದರು. ಅಲಹಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವುದರಿಂದ ಇವರು ರಾಜಕಾರಣ ಕ್ಷೇತ್ರವನ್ನು ಪ್ರವೇಶಿಸಿದರು, ಅವರು ಸ್ವದೇಶಿ ಮತ್ತು ವಿದೇಶಿ ವಸ್ತ್ರ ಬಹಿಷ್ಕಾರ ಚಳುವಳಿಯಲ್ಲಿ ಭಾಗವಹಿಸಿದರು. ೧೯೦೫ರಲ್ಲಿ ಗೋಪಾಲ ಕೃಷ್ಣ ಗೋಖಲೆಯವರೊಡಗೂಡಿ ಇಂಗ್ಲೆಂಡಿನಲ್ಲಿ ಜನಾಭಿಪ್ರಾಯ ಮೂಡಿಸಲು ಸಂಚಾರ ಮತ್ತು ೧೯೦೭ರಲ್ಲಿ ಕೃಷಿಕ ಸಮಾಜದ ಚಳುವಳಿಯಲ್ಲಿ ಭಾವಹಿಸಿದ ಕಾರಣ ಅವರನ್ನು ಬರ್ಮಾಕ್ಕೆ ಗಡೀಪಾರು ಮಾಡಲಾಯಿತು. ೧೯೦೮ರಲ್ಲಿ ಇಂಗ್ಲೆಂಡಿಗೆ, ೧೯೧೩ರಲ್ಲಿ ಇಂಗ್ಲೆಂಡ್, ಜಪಾನ್ ಮತ್ತು ಅಮೇರಿಕಾಕ್ಕೆ ಉಪನ್ಯಾಸಕ್ಕಾಗಿ ಸಂಚರಿಸಿದರು. ಅಮೇರಿಕಾದಲ್ಲಿದ್ದಾಗ 'ಇಂಡಿಯನ್ ಹೋಂ ರೂಲ್ ಲೀಗ್' ಕಟ್ಟಿದರು. ೧೯೨೦ನೇ ಇಸವಿಯ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದರು. ೧೯೨೧ರಲ್ಲಿ ನಡೆದ ಅಸಹಕಾರ ಚಳುವಳಿಯ ನೇತೃತ್ವಕ್ಕಾಗಿ ಬಂಧಿಸಲ್ಪಟ್ಟರು. ಭಾರತೀಯ ಕಾರ್ಮಿಕರ

ಪ್ರತಿನಿಧಿಯಾಗಿ ಜಿನಿವಾದಲ್ಲಿ ನಡೆದ ೧೯೨೬ರ ಅಂತರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಪಾಲ್ಗೊಂಡರು. ಗಯಾ ಅಧಿವೇಶನದಲ್ಲಿ ಕಾಂಗ್ರೆಸ್ ವಿಭಜನೆಯಾದಾಗ ಅವರು ಸ್ವರಾಜ್ಯ ಪಕ್ಷ ಸೇರಿದರು. ೧೯೨೮ರ ಅಕ್ಟೋಬರ್ ೩೦ನೇ ತಾರೀಖು ನಡೆದ ಸೈಮನ್ ವಿರೋಧಿ ಪ್ರತಿಭಟನಾ ರ‍್ಯಾಲಿಯಲ್ಲಿ ಲಾಲಾಜಿಯ ಮೇಲೆ ಲಾಠಿ ಪ್ರಹಾರವಾಯಿತು. ಅವರೇ ಅದರ ನೇತಾರರಾಗಿದ್ದರು. ಅನಂತರ ನವೆಂಬರ್ ೧೭ನೇ ತಾರೀಖು ಅದೇ ವರ್ಷ ಅವರು ಅಸುನೀಗಿದರು. ಲಾಠಿ ಪ್ರಹಾರದಿಂದಾದ ಗಾಯಗಳ ಪರಿಣಾಮವಾಗಿ ಅವರ ನಿಧನವಾಯಿತೆಂಬ ಬಲವಾದ ಅನುಮಾನ ದೇಶದಲ್ಲೆಲ್ಲಾ ಬೆಳೆಯಿತು. ಲಾಲಾಜಿ ಪ್ರಭಾವಕಾರಿ ಭಾಷಣಕಾರರು, ಉತ್ತಮ ಬರಹಗಾರರು ಮತ್ತು ಶ್ರೇಷ್ಠದರ್ಜೆಯ ಪತ್ರಕರ್ತರಾಗಿದ್ದರು. ಅವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಲೇಖಕರಾಗಿ ಅನ್ಯ ಬರಹಗಳ ಜೊತೆಗೆ ಗೀತಾ ಸಂದೇಶವನ್ನೂ ಬರೆದರು.

ಮದನ ಮೋಹನ ಮಾಳವೀಯ (೧೮೬೧-೧೯೪೬)

೧೮೮೬ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನವನ್ನು ಸೇರಿ ಅಲ್ಲಿ ಬಹು ಪ್ರಭಾವಕಾರಿ ಭಾಷಣ ಮಾಡಿದರು. ಕಾಂಗ್ರೆಸ್ ಸಂಸ್ಥಾಪಕ ಎ.ಒ.ಹ್ಯೂಂ ಸಹ ಅವರ ಭಾಷಣಕ್ಕೆ ತಲೆತೂಗಿದರು. ಮಾಳವೀಯರು ಪತ್ರಿಕಾ ಸಂಪಾದಕರಾಗಿ ದುಡಿದರು. ೧೮೮೬ ರಿಂದ ೧೯೩೬ರ ವರೆಗೆ ಪ್ರತಿವರ್ಷದ ಕಾಂಗ್ರೆಸ್ ಅಧಿವೇಶನದಲ್ಲೂ ತಪ್ಪದೇ ಭಾಗವಹಿಸಿದರು. ೧೯೦೯, ೧೯೧೮, ೧೯೩೨, ಮತ್ತು ೧೯೩೩ರ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟರೂ ಸರ್ಕಾರಿ ಪ್ರತಿಬಂಧಕಾಜ್ಞೆಯ ಕಾರಣ ಕೊನೆಯ ಎರಡು ಅಧಿವೇಶನಗಳಿಗೆ ಮಾತ್ರ ಅಧ್ಯಕ್ಷತೆ ವಹಿಸಲು ಸಾಧ್ಯವಾಯಿತು. ೧೯೦೬ರಲ್ಲಿ ಹಿಂದೂ ಮಹಾ ಸಭೆಯನ್ನು ಸ್ಥಾಪಿಸಿದರು. ಅವರು ಸಂಪಾದಿಸಿ ಹೊರಡಿಸಿದ ಪತ್ರಿಕೆಗಳು ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬಹಳ ಬಲತಂದುಕೊಟ್ಟವು. ಪ್ರಾಂತೀಯ ವಿಧಾಯಕ ಸಭೆ ಮತ್ತು ಸಾಮ್ರಾಜ್ಯದ ಕೇಂದ್ರೀಯ ವಿಧಾಯಕ ಪರಿಷತ್ತುಗಳಲ್ಲೂ ನಿರಂತರ ಹೋರಾಟ ನಡೆಸಿದರು. ಸಾಮ್ರಾಜ್ಯದ ಕಾಲೋನಿಗಳಿಗೆ ಭಾರತೀಯ ಕರಾರುಬದ್ಧ ಆಳುಗಳನ್ನು ಸಾಗಿಸುವ ಪದ್ಧತಿಯನ್ನು ಬಲವಾಗಿ ವಿರೋಧಿಸಿದರು. ಅದರ ಪ್ರತಿಫಲ ೧೯೧೭ರಲ್ಲಿ ಸಿಕ್ಕಿತು. ಮಾಳವೀಯರು ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಬನಾರಸ್‌ನ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದು ಅವರ ಜೀವನದ ಸರ್ವೋತ್ಕೃಷ್ಟ ಸಾಧನೆ.೧೯೧೯ರಿಂದ ೧೯೩೮ರ ವರೆಗೂ ಅದರ ಉಪಕುಲಪತಿಗಳಾಗಿದ್ದರು. ಸಾಮಾಜಿಕ ವಿಷಯಗಳಲ್ಲಿ ಸಾಂಪ್ರದಾಯಿಕ ದೃಷ್ಟಿಕೋನದವರೇ ಆಗಿದ್ದರೂ, ಅಸ್ಪೃಶ್ಯತಾ ನಿವಾರಣೆಯ ಚಳುವಳಿಗೆ ಪೂರ್ಣ ಸಹಾನುಭೂತಿ ವ್ಯಕ್ತಪಡಿಸಿದ್ದರು.

ಡಾ.ಜೆ.ಸಿ. ಕುಮಾರಪ್ಪ (೧೮೯೨-೧೯೬೦)

ಅರ್ಥಶಾಸ್ತ್ರಜ್ಞರು, ಚಿಂತಕರು, ಮಾರ್ಗದರ್ಶಕರು ಮತ್ತು ವ್ಯಾಖ್ಯಾನಕಾರರು. ಗ್ರಾಮೋದ್ಯೋಗ-ಕುಟೀರ ಉದ್ಯೋಗಗಳ ಪ್ರವರ್ತಕರು. ಗಾಂಧೀಜಿಯ ದಂಡಿಯಾತ್ರೆಯ ಸಂದರ್ಭದಲ್ಲಿ, ೧೯೩೧ರ ನಂತರ 'ಯಂಗ್ ಇಂಡಿಯಾ'ದ ಸಂಪಾದಕರು. ಗ್ರಾಮೀಣ ಭಾರತದ ಸಂಬಂಧದ ಅನೇಕ ವಿಚಾರಣಾ ಮತ್ತು ಶೋಧನಾ ಕಾರ್ಯಗಳನ್ನು

ನಡೆಸಿಕೊಟ್ಟವರು. ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿ ಮತ್ತು ಗ್ರಾಮೋದ್ಯೋಗ ಪತ್ರಿಕೆ ಸಂಪಾದಕರು. ಗಾಂಧೀ ವಿಚಾರಧಾರೆ ಮತ್ತು ಗಾಂಧೀ ಅರ್ಥಶಾಸ್ತ್ರದ ಪ್ರಬಲ ವಕ್ತಾರರು, ಪ್ರತಿಪಾದಕರು. ಸರ್ವೋದಯ ದೃಷ್ಟಿಯಿಂದ ಕ್ರೈಸ್ತಮತ ವಿಚಾರಗಳನ್ನು ವಿಶ್ಲೇಷಿಸುವವರು. ಸ್ವತಂತ್ರ ಭಾರತದಲ್ಲಿ ರಾಜಕೀಯ ಮತ್ತು ಆರ್ಥಿಕ ಪರ್ಯಾಯಗಳ ಬಗೆಗೆ ವಿಶಿಷ್ಟ ದೃಷ್ಟಿಕೋನದಿಂದ ವಿಚಾರಿಸಿ ಯೋಜನೆಗಳ ರಚನಾಕಾರರು. ಇದೇ ದೃಷ್ಟಿಯಿಂದ ಚೈನಾ ಯಾತ್ರೆ ಕೈಗೊಂಡರು. ಅನೇಕ ಗ್ರಂಥ, ಲೇಖನ, ಶೋಧ ಪತ್ರಗಳನ್ನು ಬರೆದವರು. ಅವುಗಳಲ್ಲಿ ಶಾಶ್ವತ ಅರ್ಥಶಾಸ್ತ್ರ, ಗ್ರಾಮೀಣ ಆಂದೋಲನವೇಕೆ? ಇವು ಸುಪ್ರಸಿದ್ಧವಾದುವು.

ದೇವದಾಸ್ ಗಾಂಧೀ (೧೯೦೦-೧೯೫೭)

ಗಾಂಧೀಜಿಯ ಕೊನೆಯ ಮಗ. ೧೯೩೧ರಲ್ಲಿ ದುಂಡು ಮೇಜಿನ ಪರಿಷತ್ತಿನಲ್ಲಿ ಸೇರಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಬಾರಿ ಸೆರೆಮನೆ ಸೇರಿದರು. ೧೯೩೦ರ ದಶಕದಿಂದ ಮರಣ ಕಾಲದ ವರೆಗೂ 'ಹಿಂದೂಸ್ತಾನ್ ಟೈಮ್ಸ್' ದಿನಪತ್ರಿಕೆಯ ಸಂಪಾದಕರು. ಅಖಿಲ ಭಾರತ ಸಮಾಚಾರ ಪತ್ರಗಳ ಸಂಪಾದಕರ ಸಮ್ಮೇಳನದ ಅಧ್ಯಕ್ಷರು. ಗಾಂಧೀ ಸ್ಮಾರಕ ನಿಧಿಯ ನಿರ್ಮಾಣದಲ್ಲಿ ಮುಂದಾಳತ್ವ ಮತ್ತು ಫಿಲಂಸ್ ಕಮಿಟಿಯ ಅಧ್ಯಕ್ಷರಾಗಿದ್ದರು ತನ್ಮೂಲಕ ಗಾಂಧೀಜಿಯ 'ಫೂಟೇಜ್' ಮೊಟ್ಟ ಮೊದಲ ಬಾರಿಗೆ ಸಂಗ್ರಹಿಸಿದರು. ತತ್ಫಲವಾಗಿ ವಿಠಲಭಾಯಿ ಝ್ವೇರಿ ಮತ್ತು ರಿಚರ್ಡ್ ಅಟೆನ್‌ಬರೋಗಳ ಫಿಲಂಗಳು ತಯಾರಾಗಲು ಸಾಧ್ಯವಾಯಿತು. ಪಿ.ಟಿ.ಐ. ಸುದ್ದಿ ಸಂಸ್ಥೆ ಅಧ್ಯಕ್ಷರಾಗಿದ್ದರು. ರಾಯಿಟರ್ ಸುದ್ದಿ ಸಂಸ್ಥೆಯ ಡೈರೆಕ್ಟರರಾಗಿದ್ದರು. ಹೋರಾಟದ ಅನೇಕ ಸಂದರ್ಭಗಳಲ್ಲಿ ಗಾಂಧೀ ದೂತರಾಗಿ, ದೌತ್ಯ ಮಾಡಿ ಸತ್ಯನಿಷ್ಠರಾಗಿ ಬೆಳೆದರು. ದಕ್ಷಿಣ ಭಾರತದಲ್ಲಿ ಹಿಂದೀ ಪ್ರಚಾರ-ಪ್ರಸಾರಕ್ಕಾಗಿ ಕಳುಹಿಸಲ್ಪಟ್ಟರು.

ಹರಿಲಾಲ್ ಗಾಂಧೀ (೧೮೮೮-೧೯೪೮)

ಗಾಂಧೀಜಿ ನಡೆಸಿದ ದಕ್ಷಿಣ ಆಫ್ರಿಕಾ ಸತ್ಯಾಗ್ರಹದಲ್ಲಿ ಆರು ಬಾರಿ ಪಾಲ್ಗೊಂಡು ಒಂದೂವರೆ ವರ್ಷಕ್ಕೂ ಹೆಚ್ಚು ಕಾಲ ಜೈಲಿನಲ್ಲಿದ್ದರು. ಭಾರತದ ಸತ್ಯಾಗ್ರಹಗಳಲ್ಲಿಯೂ ಕನಿಷ್ಠ ಎರಡು ಬಾರಿ ಸೇರಿಕೊಂಡು ಸೆರೆವಾಸದ ಶಿಕ್ಷೆ ಅನುಭವಿಸಿದರು. ಗಾಂಧೀಜಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಕಷ್ಟು ಗಮನ ಕೊಡಲಿಲ್ಲವೆಂಬ ಕಾರಣಕ್ಕೆ ಅವರನ್ನು ದೂಷಿಸಿ ಅವರಿಂದ ದೂರವಾಗಿ ಸ್ವತಂತ್ರವಾಗಿ ಶಿಕ್ಷಣ ಪಡೆಯಲು ಪ್ರಯತ್ನಿಸಿದರು. ಆದರೆ ವಿಫಲರಾದರು. ಕಲ್ಕತ್ತಾದಲ್ಲಿ ನೌಕರಿ ಮಾಡಿದ ನಂತರ ತನ್ನದೇ ಸ್ವಂತ ವ್ಯಾಪಾರ ಮಾಡಲು ಪ್ರಯತ್ನಿಸಿದರು. ಈ ಎರಡೂ ಪ್ರಸಂಗಗಳಲ್ಲಿ ಹಣಕಾಸಿನ ವ್ಯವಹಾರದಲ್ಲಿ ಮೋಸಗಾರಿಕೆಯ ಆರೋಪ ಹೊತ್ತು ಮತ್ತು ೧೯೧೮ರಲ್ಲಿ ಪತ್ನಿಯನ್ನು ಕಳೆದುಕೊಂಡು ವಿಹ್ವಲನಾಗಿ, ಕುಡಿತದ ಚಟಕ್ಕೆ ಬಲಿಯಾದರು. ಧರ್ಮಾಂತರ ಮಾಡಿಕೊಂಡು ಮತ್ತೆ ಹಿಂದೂ ಧರ್ಮಕ್ಕೆ ಮರಳಿದರು. ತನ್ನ ಕಾರಣದಿಂದ ತಂದೆ-ತಾಯಿಯರ ದುಃಖಕ್ಕೆ ಕಾರಣರಾದರು. ಎರಡು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನನ್ನು ಅಗಲಿ ಅಸುನೀಗಿದರು. ಅಜ್ಜಿಯೇ ಮೊಮ್ಮಕ್ಕಳನ್ನು ಸಾಕಿ ಸಲಹಿದರು. * * *

ಲಂಡನ್ನಿನಲ್ಲಿ ಸಂಸ್ಕೃತ

- ಸಂಗ್ರಹ: ನೀಲತ್ತಹಳ್ಳಿ ಕಸ್ತೂರಿ

ಲಂಡನ್‌ನ ಕೆನ್ಲಿಂಗ್‌ಟನ್ ಒಲಿಂಪಿಯಾ ಬಳಿಯ ಇಮರ್ಸ್ ಬೈ ಸ್ಟ್ರೀಟ್‌ನಲ್ಲಿ ಒಂದು ಶಾಲೆ, ಸೇಂಟ್ ಜೇಮ್ಸ್ ಇಂಡಿಪೆಂಡೆಂಟ್ ಸ್ಕೂಲ್. ಎಷ್ಟೋ ಶಾಲೆಗಳಂತೆ ಅದೂ ಒಂದು ಶಾಲೆ, ವಿಶೇಷವೇನು? ವಿಶೇಷ ಇದು-ಅಲ್ಲಿ ಸಂಸ್ಕೃತವನ್ನು ಕಡ್ಡಾಯ ವಿಷಯವಾಗಿ ಕಲಿಸುತ್ತಾರಂತೆ, ಈ ಭಾಷೆಯನ್ನು ಕಲಿತರೆ ಬೇರೆ ಐರೋಪ್ಯ ಭಾಷೆಗಳನ್ನು ಸರಾಗವಾಗಿ ಕಲಿಯಲು ಸಾಧ್ಯ. ಗಣಿತ, ವಿಜ್ಞಾನಗಳ ಗ್ರಹಿಕೆಗೆ ಅನುಕೂಲ ಮಾತ್ರವಲ್ಲ ಮಗುವಿನ ಸರ್ವತೋಮುಖ ಜ್ಞಾನಾಭಿವೃದ್ಧಿಗೆ ಸಹಾಯಕ ಇದು ಎಂಬುದು ಆ ಶಾಲೆಯ ನಂಬಿಕೆ.

ಮಿ॥ ವಾರವಿಕ್ ಜೋಸೆಫ್ ಎಂಬುವವರು ಅಲ್ಲಿನ ಸಂಸ್ಕೃತ ವಿಭಾಗದ ಮುಖ್ಯಸ್ಥರು. ಆತ ಆಕ್ಸ್‌ಫರ್ಡ್‌ನ ಡಾಕ್ಟರೇಟ್ ಪದವೀಧರ. ಅವರು ಶಾಲೆಯ ೮೦೦ ವಿದ್ಯಾರ್ಥಿಗಳ ಜೀವನದ ನಿತ್ಯ ವ್ಯವಹಾರದಲ್ಲಿ ಸಂಸ್ಕ್ರತವನ್ನು ಬೆರೆಸಿಬಿಟ್ಟಿದ್ದಾರೆ. ೨೦ ವರ್ಷದಿಂದ ಇಲ್ಲಿ ಸಂಸ್ಕ್ರತ ಭೋಧನೆ ನಡೆದಿದೆ.

ಇಂಗ್ಲಿಷ್ ಸೇರಿದಂತೆ ಎಲ್ಲಾ ಇಂಡೋ ಯುರೋಪಿಯನ್ ಭಾಷೆಗಳ ಮೂಲ ಭಾಷೆಗೆ ತೀರ ಸಮೀಪವಾದದ್ದು ಸಂಸ್ಕೃತ. ಅಮೇರಿಕದಿಂದ ಹಿಡಿದು ಬಂಗಾಳದವರೆಗಿನ ಎಷ್ಟೋ ಭಾಷೆಗಳಗೆ ನಿಕಟವಾದದ್ದು. ಮಾತು ಮತ್ತು ವಿಚಾರಗಳ ಪರಿಷ್ಕರಣೆಗೆ ಶತ ಶತಮಾನಗಳಿಂದಲೂ ನಡೆದುಬಂದಿರುವ ಮಹಾ ಪ್ರಯತ್ನದ ಪರಾಕಾಷ್ಠೆಯ ಫಲವೇ ಸಂಸ್ಕೃತ. ಆದ್ದರಿಂದ ಮನುಕುಲ ನಾಗರಿಕತೆಯ ಶಿಖರವನ್ನು ಅನ್ವೇಷಿಸಬಹುದು. ತತ್ವಶಾಸ್ತ್ರ ಪರಿಣತಿಯ ಆಳವನ್ನು ಅಳೆಯಬಹುದು, ಅಪಾರ ಬುದ್ಧಿ ಇದ್ದ ವ್ಯಕ್ತಿಗಳ ಸಾಧನೆಯ ಶಿಖರ ಅದು-ಎನ್ನುತ್ತಾರೆ ಮುಖ್ಯೋಪಾಧ್ಯಾಯ ಮಿ.ಮೈಲ್ ಮಾನ್.

ಜಗತ್ತಿನ ಅತ್ಯಂತ ಪರಿಪೂರ್ಣಭಾಷೆ, ತರ್ಕಬದ್ಧ ಭಾಷೆ ಸಂಸ್ಕೃತ. ಮಾತಾಡುವ ಜನರ ಹೆಸರನ್ನು ಪಡೆಯದ ಏಕೈಕ ಭಾಷೆ, ಆ ಶಬ್ದದ ಅರ್ಥವೇ 'ಪರಿಪೂರ್ಣ ಭಾಷೆ' ಎಂದು.ಅದರ ರಚನೆ ಅದ್ಭುತ, ಅದು ಗ್ರೀಕ್ ಭಾಷೆಗಿಂತ ಪರಿಪೂರ್ಣ, ಲ್ಯಾಟಿನ್‌ಗಿಂತ ವಿಶಾಲ, ಎರಡಕ್ಕಿಂತಲೂ ಅತಿ ಉತ್ಕೃಷ್ಟ, ಅದರ ವ್ಯಾಕರಣ ಆಲೋಚನೆಯನ್ನು ನಿಚ್ಚಳಗೊಳಿಸುತ್ತದೆ. ಇಂಗ್ಲಿಷ್‌ನಂತಲ್ಲದೇ, ಅದು ಸಂಪೂರ್ಣವಾಗಿ ಶುದ್ಧ ಭಾಷೆ, ಮಕ್ಕಳ ಕೈಬರಹ, ಉಚ್ಚಾರಣೆಗಳಿಗೆ ಕೌಶಲ ನೀಡಿ ಅತ್ಯಂತ ಶುದ್ಧಗೊಳಿಸಬಲ್ಲದು.

ಇಂದಿನ ಯೂರೋಪಿಯನ್ ಭಾಷೆಗಳನ್ನು ಆಡುವಾಗ ಅಥವಾ ಬರೆಯುವಾಗ, ನಾಲಗೆಯ ಇಲ್ಲವೇ ಬೆರಳುಗಳ ಚಲನೆಯಲ್ಲಿ ಅವುಗಳ ಅನೇಕ ಭಾಗಗಳು ಬಳಕೆಯಾಗುವುದಿಲ್ಲ. ಆದರೆ, ಸಂಸ್ಕೃತ ಹಾಗಲ್ಲ, ಎಲ್ಲಾ ಕೌಶಲದ ವೃದ್ಧಿಗೂ ಸಹಾಯಕ. ಸಂಸ್ಕೃತದ ಅಳವಡಿಕೆ ಆ ಶಾಲೆಯಲ್ಲಿ ಸುಲಭವೇನೂ ಆಗಿರಲಿಲ್ಲ. ಮಿ.ಜೋಸೆಫ್ ಅವರು ಅದಕ್ಕಾಗಿ ರಾಮಾಯಣ, ಮಹಾಭಾರತದ ಅದ್ಭುತ ಕಥೆಗಳನ್ನು ಮತ್ತು ಕೃಷ್ಣ ಕಥೆಗಳನ್ನು ಬಳಸಿಕೊಂಡರು. ಅದು ಮಕ್ಕಳಲ್ಲಿ ಪರಿವರ್ತನೆ ಉಂಟುಮಾಡಿತು. ಪೋಷಕರು

೨೮ನೇ ಪುಟ ನೋಡಿ...

ಸ್ವಾತಂತ್ರ ಹೋರಾಟ ಯೋಧನ ಅನುಭವ

– *ಚಳ್ಳಕೆರೆ ಕೃಷ್ಣರಾವ್*

ಮಾನ್ಯ ಬಂಧುಗಳೇ,

ಹೌದು, ನಮ್ಮ ದೇಶಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಸೇವೆ ಸಲ್ಲಿಸಿರುವವರೆಲ್ಲರೂ ಬಂಧುಗಳೇ. ನಾನು ಗಾಂಧೀಜಿಯವರ ಅವ್ಯಕ್ತಶಕ್ತಿಗೆ ಆಕರ್ಷಿತನಾಗಿ ಕಾಂಗ್ರೆಸ್ ಕೆಲಸಗಾರನಾಗಿ ಸ್ವಾತಂತ್ರ್ಯಕ್ಕಾಗಿ ನನ್ನ ಭಾಗದ ಸಕ್ರಿಯಾತ್ಮಕ ದುಡಿಮೆ, ಅದರ ಹಿನ್ನೆಲೆ ಸ್ವಲ್ಪದರಲ್ಲಿ ಹೇಳುತ್ತೇನೆ. ನನ್ನ ಊರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ. ೧೯೨೪ರಲ್ಲಿ ದಾವಣಗೆರೆಯಲ್ಲಿ ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಪೂಜ್ಯ ಗಾಂಧೀಜಿಯವರು ಆಗಮಿಸಿದ್ದರು. ಮೊದಲ ಬಾರಿಗೆ ದೂರದಿಂದ ದರ್ಶನ ಮಾಡಿದೆ. ಅಲ್ಪ ಸ್ವಲ್ಪ ಅವರ ವಾಣಿಯನ್ನೂ ಸಹ ಕೇಳಿಸಿಕೊಂಡೆ. ಅಗಿನಿಂದಲೂ ಗಾಂಧೀಜಿಯವರು ಹೇಳುತ್ತಿದ್ದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ನನ್ನನ್ನು ತೊಡಗಿಸಿಕೊಂಡೆ. ಪುನಃ ೧೯೨೮–೨೯ರಲ್ಲಿ ನಾನು ಬೆಂಗಳೂರಿನಲ್ಲಿ ಇಂಟರ್ ಮೀಡಿಯಟ್ ವಿದ್ಯಾರ್ಥಿಯಾಗಿದ್ದಾಗ ಗಾಂಧೀಜಿಯವರು ನಮ್ಮ ಕಾಲೇಜಿನ ಒಳ ಆವರಣದಲ್ಲಿ ಭಾಷಣ ಮಾಡಿದಾಗ ಹತ್ತಿರದಿಂದ ನೋಡಿ, ಮಾತುಗಳನ್ನು ಕೇಳಿ, ದೇಶಕ್ಕಾಗಿ ಶ್ರಮಿಸುವ ಮನಸ್ಸು ಬಲ ಪಟ್ಟಿತು. ಪರಿಣಾಮವಾಗಿ ನಾನು ಚಳ್ಳಕೆರೆಯಲ್ಲಿ ಹರಿಜನರ ಹಟ್ಟಿಯಲ್ಲಿ ಅವರ ದೇವಸ್ಥಾನದಲ್ಲಿಯೇ ಅವರ ಮಕ್ಕಳಿಗೆ ಅಕ್ಷರ ಓದು ಬರಹ ಕಲಿಸುತ್ತಾ ರಾಟೆಯಿಂದ ನೂಲು ತೆಗೆಯುತ್ತಾಯಿದ್ದೆ. ಹೀಗೆ ಅನೇಕ ದಿವಸಗಳ ನಂತರ ಒಂದು ದಿನ ಹರಿಜನರ ಗುರುಗಳಾಗಿದ್ದ ಆದಿ ಜಾಂಬವ ಮುನಿ ಎಂಬುವವರನ್ನು ನನ್ನ ಮನೆಗೆ ಕರೆತಂದೆ. ಈ ವೇಳೆಗೆ ನನ್ನ 'ವಂದೇ ಮಾತರಂ' ಮನೆಯಲ್ಲಿಯೇ ಕಾಂಗ್ರೆಸ್‌ನ ಎಲ್ಲ ಕೆಲಸಗಳನ್ನು ನಡೆಸುತ್ತಿದ್ದೆವು. ಕ್ರಮೇಣ ನಮ್ಮ ಕಾಂಗ್ರೆಸ್ ಸಮಿತಿಯೂ ಬಲಗೊಂಡಿತು. ಮುಖಂಡರುಗಳಾದ ಶ್ರೀ ದಾಸಪ್ಪನವರು, ಶ್ರೀ ವೀರಣ್ಣಗೌಡರು, ಪತ್ನಿ ತಾಯಮ್ಮನವರು, ಶ್ರೀ ಟಿ.ಸಿದ್ದಲಿಂಗಯ್ಯನವರು, ಶ್ರೀ ಎಸ್.ನಿಜಲಿಂಗಪ್ಪನವರು ಎಲ್ಲರೂ ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ನಾವು ಹಳ್ಳಿಗಳಿಗೆ ಹೋಗಿ ಶಾನುಭೋಗರುಗಳು, ಪಟೇಲರುಗಳು ರಾಜೀನಾಮೆ ಕೊಡುವಂತೆಯೂ ಸರ್ಕಾರಕ್ಕೆ ಕಂದಾಯ ಪಾವತಿ ಮಾಡದಂತೆಯೂ ಪ್ರಚಾರ ಮಾಡುತ್ತಾ,ಸರ್ಕಾರಕ್ಕೆ ವಿರುದ್ಧವಾದ ಎಲ್ಲಾ ಕೆಲಸಗಳನ್ನು ಮಾಡುತ್ತಾ ಹೆಚ್ಚು ಹೆಚ್ಚು ಪ್ರಚೋದಿಸುತ್ತಿದ್ದವು. ಇದೇ ವೇಳೆಗೆ ತುರುವನೂರಲ್ಲಿ ಈಚಲ ಮರದ ಸತ್ಯಾಗ್ರಹ ನಡೆದು ಸ್ವಾತಂತ್ರ ಚಳುವಳಿ ಭುಗಿಲೆದ್ದಿತು. ನಾನು ೧೯೩೪–೩೫ರಲ್ಲಿನ ಲಾಯರ್ ಆದ ಮೇಲೂ ಸಹ ಚಳುವಳಿ ಮುಂದುವರಿಸಿದೆ.ಚಳ್ಳಕೆರೆಯಲ್ಲಿ ತಾಲ್ಲೂಕ್ ಆಫೀಸ್ ಕಟ್ಟಡದ ಮೇಲೆ ಕಾಂಗ್ರೆಸ್ ಬಾವುಟ ಹಾರಿಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಸಭೆ ನಡೆಸಿದೆವು.ಮರುದಿನ ಬೆಳಗ್ಗೆ ೭ ಗಂಟೆಗೆ ನನ್ನ ಮಿತ್ರರಾಗಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಜಂಬುನಾಥ್ ಅಯ್ಯರ್ ಅವರು ನನ್ನನ್ನು ದಸ್ತಗಿರಿ ಮಾಡಿ ಚಿತ್ರದುರ್ಗ ಕೋರ್ಟಿನಲ್ಲಿ ಶಿಕ್ಷೆ ವಿಧಿಸಲ್ಪಟ್ಟು ಬೆಂಗಳೂರು ಸೆಂಟ್ರಲ್ ಜೈಲಿಗೆ ಹಾಕಿದರು.ಇದು ೧೯೩೯ ಸೆಪ್ಟೆಂಬರ್ ಸುಮಾರಿಗೆ. ಆಗಿನ ಜೈಲುವಾಸ ಅಸಹನೀಯವಾದದ್ದು,

ಮರೆಯಲಾಗದ್ದು.

೧೯೩೯ನೇ ಇಸವಿ, ಸೆಪ್ಟೆಂಬರ್‌ನಿಂದ ಕೆಲವು ತಿಂಗಳುಗಳು, ನಾನು ಮತ್ತು ನನ್ನೊಂದಿಗಿದ್ದ ರಾಜಕೀಯ ಕೈದಿಗಳು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಅನುಭವಿಸಿದ ಅಸಹನೀಯ, ಮರೆಯಲಾಗದ ಅನುಭವಗಳನ್ನು ತಿಳಿಸುತ್ತೇನೆ, ಜೈಲಿನಲ್ಲಿ ಮುಂಚೆನಿಂದಲೂ ಇದ್ದ ಕೈದಿಗಳು ರಾತ್ರಿ ವೇಳೆ ಆಳೆತ್ತರದ ತಾಮ್ರದ ಕಡಾಯಗಳಲ್ಲಿ ಮಾಡಿ ರಾಶಿ ಇಟ್ಟಿದ್ದ ರಾಗಿಮುದ್ದೆ, ಸೊಪ್ಪಿನ ಸಾರು ಇಷ್ಟೇ ಬೆಳಗ್ಗಿನ ಆಹಾರ. ನಮಗೆ ಬೆಳಗ್ಗಿನ ರೋಲ್‌ಕಾಲ್ ಸಮಯದಲ್ಲಿ ಮಣ್ಣಿನ ತಟ್ಟೆಯಲ್ಲಿ ಮುದ್ದೆಯನ್ನು, ಮಣ್ಣಿನ ಕುಡಿಕೆಯಲ್ಲಿ ನೀರನ್ನೂ ಕೊಡುತ್ತಿದ್ದರು. ಆ ಮುದ್ದೆಗಳು ಕಿಲುಬು ಸಹಿತ ಇರುತ್ತಿದ್ದ ಕಾರಣ ಮೇಲಿನ ಭಾಗವನ್ನು ತೆಗೆದು ಉಳಿದಿದ್ದನ್ನೇ ಊಟ ಮಾಡುತ್ತಿದ್ದೆವು. ಸಂಜೆ ವೇಳೆಗೆ ಅವರು ಕೊಟ್ಟಿದ್ದೇ ಆಹಾರ. ನಾವು ಸುಮಾರು ೫೦೦–೬೦೦ ಜನ ಇದ್ದೆವು. ಶ್ರೀ ಕೆಂಚಪ್ಪ (ಅಡ್ವೊಕೇಟ್ ಮತ್ತು ಜಿಲ್ಲಾ ಬೋರ್ಡ್ ಅಧ್ಯಕ್ಷರು) ಇನ್ನೂ ಕೆಲವರು ಬಯಲು ನಾಟಕ ಆಡುತ್ತಿದ್ದರು. ಪಾತ್ರಗಳಿಗೆ ಇಳೆ ತೆಗೆಯುವ ನೆಪದಲ್ಲಿ ಮಣ್ಣಿನ ತಟ್ಟೆ ಕುಡಿಕೆಗಳನ್ನು ಒಡೆದುಹಾಕುತ್ತಿದ್ದೆವು. ಆಗಿನ ಜೈಲು ಸಿಬ್ಬಂದಿಯವರು ಒಳ್ಳೆಯವರೇ ಆಗಿದ್ದು, ವಿಶ್ವಾಸದಿಂದ ಇವುಗಳಲ್ಲಿ ಭಾಗವಹಿಸುತ್ತಿದ್ದರು. ದಿನವೂ ಗಾಡಿಗಳಲ್ಲಿ ತಟ್ಟೆ ಕುಡಿಕೆಗಳನ್ನು ತರಿಸುತ್ತಿದ್ದರು. ಕೆಲವು ಕಾಲದ ನಂತರ ಅಲ್ಯುಮಿನಿಯಂ ತಟ್ಟೆಗಳು, ಚೆಂಬುಗಳನ್ನು ಒದಗಿಸಿದರು. ಕ್ರಮೇಣ ನಮ್ಮ ಮುಖಂಡರು ಜೈಲು ಅಧಿಕಾರಿಗಳೊಂದಿಗೆ ಮಾತನಾಡಿ ಪ್ರತ್ಯೇಕ ನಮ್ಮದೇ ಕಿಚನ್ ನಿರ್ಮಾಣ ಆಗಿ ದಿನವೂ ತರಕಾರಿ ವಗೈರೆ ಒಳ್ಳೆಯ ಪದಾರ್ಥಗಳನ್ನು ಸಹಾ ನಮ್ಮವರೇ ಕೊಂಡು ಶುಚಿ ರುಚಿಯಾದ ಅನ್ನ, ಹುಳಿ, ಮಜ್ಜಿಗೆ ಇತ್ಯಾದಿಗಳನ್ನು ಒದಗಿಸಿದರು, ಅನಿರೀಕ್ಷಿತವಾಗಿ ಪರಿಣಾಮಕಾರಿಯಾಗಿ ಒಳ್ಳೆಯ ಬದಲಾವಣೆಗಳು ಆದವು. ಬೆಂಗಳೂರಿನ ಕೆಲವು ಮಹನೀಯರುಗಳು ಅಭಿಮಾನದಿಂದ ನಮ್ಮೆಲ್ಲರಿಗೂ ಮತ್ತು ಕ್ರಿಮಿನಲ್ ಕೈದಿಗಳಿಗೂ ಹಬ್ಬಗಳಲ್ಲಿ ಹಣ್ಣು ಮತ್ತು ಸಿಹಿ ಕಳಿಸಿ ಕೊಡುತ್ತಿದ್ದರು. ಈ ರೀತಿ ಆಗಿನ ಜೈಲುವಾಸ ಕಹಿಸಿಹಿಗಳ ಮಿಶ್ರಣವಾಗಿತ್ತು. (ಆಗಿನಿಂದ ಜೈಲು ಸುಧಾರಣೆ ಬಹಳ ಆಗಿ ಈಗಿನ ಜೈಲುವಾಸ ಸುಖಕರವಾಗಿ ಇದೆ. ಅದು ಶಿಕ್ಷೆಯೇ ಅಲ್ಲ ಎನ್ನಬಹುದಾಗಿದೆ. ದೇಶದಲ್ಲಿ ಬಡತನದ ರೇಖೆಯ ಕೆಳಗಿನ ಅಸಂಖ್ಯಾತ ಜನರಿಗೆ ಅಷ್ಟು ಸುಖ ಇಲ್ಲ. ಜೈಲು ಭರೋ ಎಂಬಂಥ ಸಾಧಾರಣ ಕೂಗು ಕೇಳುತ್ತಿದ್ದೇವೆ.)

ಇದೆಲ್ಲವೂ ನಮ್ಮ ಗುಂಪಿನ ನೈತಿಕ ಪರಿಣಾಮವಿದ್ದರಬಹುದು. ಅದನ್ನು ಒಡೆಯಲೆಂದೇ ಏನೋ ಇದ್ದಕ್ಕಿದ್ದಂತೆ ನನ್ನನ್ನು ಕೋಲಾರ ಜೈಲಿಗೆ, ಇತರರನ್ನು ಬೇರೆ ಕಡೆಗಳಿಗೂ ರವಾನಿಸಿದರು.

ಇನ್ನೊಂದು ವಿಷಯವನ್ನು ನಾನು ಹೇಳಲೇಬೇಕು, ರಾಷ್ಟ್ರೀಯ ಕಾಂಗ್ರೆಸನ್ನು ಪ್ರಾತಃ ಸ್ಮರಣೀಯವಾದ ಶ್ರೀ ಅರವಿಂದ ಮಹಾಶಯರು, ಶ್ರೀ ರವೀಂದ್ರನಾಥ್ ಠಾಗೂರ್ ಅವರು, ಮಹಾತ್ಮಾ ಗಾಂಧೀಜಿಯವರು, ತಿಲಕ್ ಮಹಾಶಯರು, ಮಾಳವೀಯಜೀಯವರು, ಅನ್ನಿಬಸೆಂಟ್ ಅವರು, ವಸಿಷ್ಠಮುನಿಗಳೆಂದೇ ಪ್ರಸಿದ್ಧಿ ಆಗಿದ್ದ ರಮಣಿ ಮಹರ್ಷಿಗಳ ಶಿಷ್ಯರೂ ಅಗಿದ್ದ ಗಣಪತಿ ಮುನಿಗಳು, ಇನ್ನೂ ಅನೇಕ ಮಹಾನ್

ವ್ಯಕ್ತಿಗಳು ಕಟ್ಟಿ ಬೆಳೆಸಿ ಲೋಕಕಲ್ಯಾಣವನ್ನು ಸಾಧಿಸಿದ್ದರು. ಸ್ವಾತಂತ್ರ್ಯಾನಂತರ ಮಹಾತ್ಮಾ ಗಾಂಧೀಜಿ ಬಯಸಿದ್ದಂತೆ, ರಾಷ್ಟ್ರೀಯ ಕಾಂಗ್ರೆಸ್ಸನ್ನು ಮುಕ್ತಾಯ ಮಾಡಿದ್ದರೆ ಅದರ ಪವಿತ್ರ ಸ್ಮರಣೆ ಚಿರಕಾಲ ಉಳಿದಿರುತ್ತಿತ್ತು. ಆದರೆ ದೈವ ಸಂಕಲ್ಪ, ಕೆಲವು ವರ್ಷಗಳ ನಂತರ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪನವರು ಇಂದಿರಾಗಾಂಧಿಯವರೊಡನೆ ಗುಪ್ತಸಮಾಲೋಚನೆ ಮಾಡಿ, ವಿಫಲರಾಗಿ ಇಂದಿರಾಗಾಂಧಿಯವರು ಅಂದಿನಿಂದ ತಾವೇ ಅಧ್ಯಕ್ಷರೆಂದು ಘೋಷಿಸಿಕೊಂಡ ಕೆಟ್ಟ ಘಳಿಗೆಯಲ್ಲೇ ರಾಷ್ಟ್ರೀಯ ಕಾಂಗ್ರೆಸ್ ಇಲ್ಲದಾಯಿತು. ಆಗ ವಾಪಸ್ಸು ಬರಲು ಕಾರಿನಲ್ಲಿ ಕುಳಿತಿದ್ದ ನಿಜಲಿಂಗಪ್ಪನವರ ಮೇಲೆ 'ಯಂಗ್‌ಟರ್ಕ್ಸ್' ಗುಂಪು ಹಲ್ಲೆಯನ್ನು ನಡೆಸಿತು. ಅಂದಿನಿಂದ ಕಾಂಗ್ರೆಸ್-ಐ ಎಂಬುದು ಸ್ವಾರ್ಥಿಗಳ, ಕಪಟಿಗಳ ಗುಂಪಾಗಿ ಮುಂದುವರೆದಿದೆ. ದೇಶದ ಅವನತಿಯನ್ನು ಎಲ್ಲರೂ ಅನುಭವಿಸುತ್ತಿದ್ದೇವೆ. ಭವಿಷ್ಯದಲ್ಲಿ ನಮ್ಮ ಭಾರತದ ಜನತೆಗೆ ಸರ್ವತೋಮುಖವಾದ ಅಭಿವೃದ್ಧಿಯನ್ನು ದಯಪಾಲಿಸಲೆಂದು ನಾನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

* * *

....ಲಂಡನ್ನಿನಲ್ಲಿ ಸಂಸ್ಕೃತ

ಈ ಪ್ರಯೋಗಕ್ಕೆ ಸ್ಪಂದಿಸಿದರು. ತಮ್ಮ ಮಕ್ಕಳು ಎಲ್ಲವನ್ನೂ ಕ್ಷಿಪ್ರವಾಗಿ ಕಲಿಯುತ್ತಿದ್ದಾರೆ. ಎಂದು ಅವರಿಗೆ ಗೊತ್ತಾಯಿತು. ಇದರಿಂದ ಉತ್ಸಾಹಗೊಂಡ ಶಾಲೆ ಈಗ ವೈದಿಕ ಗಣಿತವನ್ನು ಕಲಿಸುತ್ತಿದೆ. ಅದರಿಂದ ಮಕ್ಕಳ ಸಂಖ್ಯಾಜ್ಞಾನ, ಮಾನಸಿಕ ಗಣನೆ ಕೌಶಲ ಅದ್ಭುತವಾಗಿ ಹೆಚ್ಚಿದೆ. ತಮ್ಮ ಶಾಲೆಯ ಮಕ್ಕಳು ಆಕ್ಸ್‌ಫರ್ಡ್ ಸಂಸ್ಕೃತ ವಿಭಾಗದಲ್ಲಿ ತುಂಬಾ ಚೆನ್ನಾಗಿ ತೇರ್ಗಡೆಯಾಗುತ್ತಿದ್ದಾರೆ ಎಂದು ಮಿ.ವಾರವಿಕ್ ಜೋಸೆಫ್‌ರಿಗೆ ಹೆಮ್ಮೆ.

ಯುರೋಪಿನಲ್ಲಿ ಪೋಲೆಂಡ್‌ನ ಜಾಗಿ ಲೋನಿಯನ್ ವಿಶ್ವವಿದ್ಯಾಲಯದ ಭಾರತೀಯಶಾಸ್ತ್ರದ ವಿಭಾಗ ಪೂರ್ಣ ಯೂರೋಪಿನಲ್ಲೆ ಅತೀ ಪ್ರಾಚೀನವಾದದ್ದು. ಅಲ್ಲಿನ ಸಂಸ್ಕೃತ ವಿಭಾಗದ ಮುಖ್ಯಸ್ಥರ ಉದ್ಗಾರ ಇದು.

"ತಮ್ಮ ಸಂಸ್ಕೃತ ಪರಂಪರೆಯನ್ನು ಉಳಿಸಿಕೊಳ್ಳಲು ಭಾರತೀಯರು ವಿಫಲರಾಗಿದ್ದಾರೆ. ಅದನ್ನು ಜೀವಂತವಾಗಿ ಇಡಲು ಹೊಸ ಹೊಸ ಬೋಧನಾಕ್ರಮಗಳನ್ನು ರೂಪಿಸಲು ವಿಫಲರಾಗಿದ್ದಾರೆ. ಅದನ್ನು ಉಚಿತ ರೀತಿಯಲ್ಲಿ ಬೋಧಿಸಿದರೆ, ಅದು ಎಂತಹ ಪ್ರಬಲ ಸಾಧನವಾಗಬಲ್ಲದು ಎಂಬುದನ್ನು ಅರಿತುಕೊಳ್ಳಲು, ಸೇಂಟ್ ಜೇಮ್ಸ್ ಶಾಲೆ ಸಹಾಯಕವಾಗಿದೆ."

– ಸಾಭಾರ : 'ನಂದಿನಿ'

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ಸಾಮಾಜಿಕ ಚಟುವಟಿಕೆಗಳ ಕೇಂದ್ರ ಹೊಸ ಜೀವನ ದಾರಿಯಲ್ಲೂ ಸಹ ಕೆಲವು ಮಹತ್ವದ ಸುಧಾರಣೆಗಳನ್ನು ಮಾಡಲಾಯಿತು. ಈ ಸುಧಾರಣೆ ಮುಖ್ಯವಾಗಿ ಅಲ್ಲಿಯ ಅಡುಗೆ ಮನೆ, ಊಟದ ಮನೆ ಮತ್ತು ಇನ್ನೂ ಎರಡು ವಸತಿ ಗೃಹಗಳಿಗೆ ಸಂಬಂಧಿಸಿದ್ದು. ಈಗಾಗಲೆ ಅಲ್ಲಿ ಕೊಳವೆ ಬಾವಿಯನ್ನು ನಿರ್ಮಿಸಿ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗಿದೆ. ಈ ಎಲ್ಲ ಸುದಾರಣೆಗಳ ನಂತರ ಹೊಸ ಜೀವನ ದಾರಿ ಕೇಂದ್ರವು ಶಿಬಿರಗಳನ್ನು ನಡೆಸಲು ಬಹಳ ಸೂಕ್ತವಾದ ಸ್ಥಳವಾಗಿ ಪರಿವರ್ತಿತಗೊಂಡಿದೆ. ಅಲ್ಲಿ ವಸತಿ ಮಾಡುವ ಜನರಿಗೆ ಎಲ್ಲಾ ಮೂಲ ಸೌಲಭ್ಯಗಳು ದೊರೆಯುವಂತಾಗಿದೆ. ಸುತ್ತಲೂ ಹಸಿರು ಪರಿಸರ, ಹಕ್ಕಿಗಳ ಕಲರವ ಮತ್ತು ಹಾರಾಟ, ಆಗಾಗ್ಗೆ ನವಿಲುಗಳ ದರ್ಶನ. ಇವು ಕೇಂದ್ರದಲ್ಲಿ ವಾಸ ಮಾಡುವವರ ಮನಸ್ಸಿಗೆ ಸಂತೋಷವನ್ನು ತಂದು ಕೊಡುತ್ತದೆ. ಅಲ್ಲದೆ ಅಲ್ಲಿಯ ಪ್ರಶಾಂತ ವಾತಾವರಣ ಚಿಂತನ–ಮನನಗಳಿಗೆ, ವಿಚಾರ ಗೋಷ್ಠಿಗಳಿಗೆ ಬಹು ತಕ್ಕದಾದ ತಾಣವಾಗಿದೆ. ಈ ಎಲ್ಲ ಸೌಲಭ್ಯದ ಪ್ರಯೋಜನವನ್ನು ಸಂಘ ಸಂಸ್ಥೆಗಳು ನಿಗದಿತ ಸ್ಥಳ ಬಾಡಿಗೆಯನ್ನು ಕೊಟ್ಟು ತಮ್ಮ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಮಕ್ಕಳಿಗೆ ಮತ್ತು ವಿದ್ಯಾರ್ಥಿಗಳಿಗೆ ಪರಿಸರ ಪಾಠ ಮಾಡಲು ಕೂಡ ಇದು ಸೂಕ್ತ ಸ್ಥಳವಾಗಿದೆ. ಒಂದು ಸಣ್ಣ ಕುಟುಂಬದ ವಿಶ್ರಾಂತಿ ಮತ್ತು ವಿಹಾರಕ್ಕಾಗಿ ಅನುಕೂಲವಾಗಿದೆ. ಅತಿಥಿ ಗೃಹವು ಸಹ ಈ ಕೇಂದ್ರದಲ್ಲಿದೆ. ದೇವಸ್ಥಾನಗಳ ಬೀಡಾದ ಮೇಲುಕೋಟೆಯು ಕೇವಲ ಆರು ಕಿಲೋಮೀಟರ್ ದೂರದಲ್ಲಿದೆ. ಒಳ್ಳೆಯ ರಸ್ತೆಯು ಸಹ ಇದೆ. ಕಾರಿನಲ್ಲಿ ಹೋದರೆ ಕೇವಲ ಹತ್ತು ನಿಮಿಷಗಳು ಸಾಕು. ಪ್ರಕೃತಿಯ ಮಧ್ಯದಲ್ಲಿ ಇರುವ ರಸ್ತೆಯಲ್ಲಿ ನಡೆದುಕೊಂಡು ಹೋಗಲು ಮಕ್ಕಾಲು ಗಂಟೆ ಸಾಕು.

ಇತ್ತೀಚಿಗೆ ಹೊಸ ಜೀವನ ದಾರಿ ಕೇಂದ್ರದಲ್ಲಿ ಒಂದು ವಾರ ಕಾಲ ಗಂಗಾಧರ ಬೆಳ್ಳಾರೆಯವರ ನೇತೃತ್ವದಲ್ಲಿ ಮನೋಚೈತನ್ಯ ಶಿಬಿರ ನಡೆಯಿತು. ಈ ಶಿಬಿರದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದ ಇಪ್ಪತ್ತೊಂದು ಯುವಕರು ಭಾಗವಹಿಸಿದ್ದರು. ಅವರಲ್ಲಿ ಕೆಲವರು ಮಹಿಳೆಯರು ಇದ್ದರು. ಶಿಬಿರವು ಯಶಸ್ವಿಯಾಗಿ ನಡೆಯಿತು. ಶಿಬಿರದ ಅವಧಿಯಲ್ಲ ಒಂದು ದಿನ ಸಂಜೆ ತಾಳಮದ್ದಲೆ ಮತ್ತು ಇನ್ನೊಂದು ಸಂಜೆ ಕುಮಾರಿ ಸುಹಾಸಿನಿಯವರಿಂದ ಭರತನಾಟ್ಯ ಕಾರ್ಯಕ್ರಮ ನಡೆದವು.

ಬೆಂಗಳೂರಿನ ಸೃಷ್ಟಿ ಎಂಬ ಸಂಸ್ಥೆಯವರು ಮೂರು ದಿನದ ಶಿಬಿರವನ್ನು ನಡೆಸಿದರು.

ಟ್ರಸ್ಟಿಗೆ ಆದಾಯ ತೆರಿಗೆ ಇಲಾಖೆಯಿಂದ ೮೦ಜಿ ಪ್ರಮಾಣ ಪತ್ರ ದೊರೆತಿದೆ. ಆದ್ದರಿಂದ ಟ್ರಸ್ಟಿಗೆ ಕೊಡುವ ದಾನದ ಮೇಲೆ ತೆರಿಗೆ ರಿಯಾಯಿತಿ ಇರುವುದರಿಂದ

೩೨ನೇ ಪುಟ ನೋಡಿ...

ಜನಪದ ನಿಲಯದ ಅಂತರಂಗದಲ್ಲಿ....೬೦

– *ಸುರೇಂದ್ರ ಕೌಲಗಿ*



ಹೊಸ ಜೀವನ ದಾರಿ ಕೇಂದ್ರ ಯುವಶಕ್ತಿಯ ಸದ್ಬಳಕೆಗೆ ತನ್ನನ್ನು ತೆರೆದುಕೊಂಡಿತು. ರಾಜ್ಯದ, ದೇಶದ ಮತ್ತು ಜಗತ್ತಿನ ಬೇರೆ ಬೇರೆ ಸ್ಥಳಗಳಿಂದ ಈ ಕೇಂದ್ರಕ್ಕೆ ಯುವಕರು ಬಂದರು. ಬಂದದ್ದು ಹಣ ಸಂಪಾದನೆಗಾಗಿ ಅಲ್ಲ; ತಮ್ಮ ಅನುಭವಕ್ಕೆ ಇನ್ನೂ ಬಾರದೆ ಇರುವ ಬದುಕಿನ ಇತರ ಪ್ರಕಾರದ ಜೀವನಾನುಭವಗಳನ್ನು ಪಡೆಯಲು; ಹೊಸ ವಿಚಾರಗಳನ್ನು ಪಡೆಯಲು. ಹೀಗೆ ವಿವಿಧ ಅವಧಿಗಳಲ್ಲಿ ಬಂದ ಯುವಕರ ಪುರುಷಾರ್ಥದ ಲಾಭವನ್ನು ಹೊಸ ಜೀವನ ದಾರಿ ಕೇಂದ್ರವೂ ಪಡೆಯಿತು, ಯುವಕರೂ ಪಡೆದರು. ಈ ಪ್ರಕ್ರಿಯೆ ೩೫ ವರ್ಷಗಳ ಹಿಂದೆ ಪ್ರಾರಂಭವಾದದ್ದು. ಈಗಲೂ ಕ್ರಿಯಾಶೀಲವಾಗಿದೆ. ವಿದೇಶಗಳ, ಮುಖ್ಯವಾಗಿ ಇಂಗ್ಲೆಂಡ್ ದೇಶದ ಯುವಕರನ್ನು ಹೊಸ ಜೀವನ ದಾರಿ ಕೇಂದ್ರ ಆಕರ್ಷಿಸಿದ ಕಥೆ ರೋಚಕವಾಗಿದೆ. ಹಾಗೆ ನೋಡಿದರೆ ಇಂಗ್ಲೆಂಡ್ ದೇಶದ ಯುವಕರು ಭಾರತದ ಕಡೆಗೆ ಆಕರ್ಷಿತರಾದದ್ದು ಇತ್ತೀಚಿಗಿನ ಸಂಗತಿಯೇನಲ್ಲ. ದರ್ಮ ಪ್ರಚಾರಕ್ಕಾಗಿ ಯುವಕರು ಬಂದಿದ್ದರು; ಭಾರತದ ಸ್ವತಂತ್ರ್ಯ ಚಳುವಳಿಯ ಕಾಲದಲ್ಲಿ ಗಾಂಧೀಜಿಯವರ ಸಹವರ್ತಿಗಳಾಗಿ ಬಂದಂಥ ಯುವಕರೂ ಇದ್ದರು. ನಂತರ ಸಂತ ವಿನೋಬಾರ ಭೂದಾನ ಆಂದೋಲನದಲ್ಲಿ, ಲೋಕನಾಯಕ ಜಯಪ್ರಕಾಶ ನಾರಾಯಣರ ಚಳುವಳಿಯಲ್ಲಿ ಭಾಗವಹಿಸಲು ಬಂದಂಥ ಯುವಕರೂ ಇದ್ದರು. ಹೀಗೆ ನೂರಾರು ವರ್ಷಗಳಿಂದ ಇಂಗ್ಲೆಂಡಿನ ಯುವಕರು ಭಾರತದ ಕಡೆಗೆ ಆಕರ್ಷಿತಗೊಳ್ಳುತ್ತಾ ಬಂದಿರುವ ಪರಂಪರೆಯ ಅಂಗವಾಗಿ ಹೊಸ ಜೀವನ ದಾರಿ ಕೇಂದ್ರದತ್ತಲೂ ಆಕರ್ಷಿತರಾಗಿ ಬಂದದ್ದು ವಿಶೇಷ ಸಂಗತಿಯೇನಲ್ಲ. ಆದರೆ, ಆ ಕೇಂದ್ರದ ಮಟ್ಟಿಗೆ ವಿಶೇಷ ಸಂಗತಿಯೇ, ಮಹತ್ವದ ಸಂಗತಿಯೇ. ಕೇಂದ್ರದತ್ತ ಯುವಕರು ಆಕರ್ಷಿತರಾಗುವುದಕ್ಕೆ ಕಾರಣ ಹೊಸ ಜೀವನ ದಾರಿ ಕೇಂದ್ರದ ಹಿಂದೆ ಇರುವ ಗಾಂಧೀ ವಿಚಾರದ ಪ್ರೇರಣೆ ಮತ್ತು ಆ ಕೇಂದ್ರವು ಒದಗಿಸುವ ವಿವಿಧ ಅನುಭವಗಳ ಅವಕಾಶಗಳು. ಹೊಸ ಜೀವನ ದಾರಿ ಕೇಂದ್ರವನ್ನು ಪ್ರಾರಂಭಿಸಿದಾಗ ಇದ್ದವರಲ್ಲಿ ಕೆಲವರು ಅಂಗವಿಕಲರು, ಇನ್ನು ಕೆಲವರು ಸಂಸಾರೊಂದಿಗರು. ಆದ್ದರಿಂದ ಕಾರ್ಯಶಕ್ತಿ ಸೀಮಿತವಾಗಿತ್ತು. ಇಂಥ ಸಮಯದಲ್ಲಿ ಕೇಂದ್ರದ ಬೆಳವಣಿಗೆಗೆ ಚಾಲನೆ ಕೊಡಲು ಬಂದರು ಸಂತೋಷ್. ಅದೇ ಹೊತ್ತಿಗೆ ಇಂಗ್ಲೆಂಡಿನ 'ಸ್ಕೂಲ್ ಪಾರ್ಟ್‌ನರ್ ಶಿಪ್ ವರ್ಲ್ಡ್ ವೈಡ್'ನ ವಿದ್ಯಾರ್ಥಿ ಸ್ವಯಂ ಸೇವಕರ ತಂಡದಲ್ಲಿ ಬಂದಿದ್ದ ಶ್ರೀಮಂತ ಕುಟುಂಬದ ಬೆಂಜಮಿನ್, ಮೇಲುಕೋಟೆ ಮತ್ತು ಹೊಸ ಜೀವನ ದಾರಿ ಕೇಂದ್ರದಲ್ಲಿದ್ದು

ವಿಶೇಷ ಅನುಭವ ಪಡೆದು, ಇಂಗ್ಲೆಂಡಿಗೆ ಹಿಂದಿರುಗಿ ಜನಪದ ಸೇವಾ ಟ್ರಸ್ಟ್‌ನಂಥ ಸ್ವಯಂ ಸೇವಾ ಸಂಸ್ಥೆಗಳಿಗೆ ಜನಸಹಾಯ ಮತ್ತು ಧನಸಹಾಯ ಒದಗಿಸಬೇಕೆಂಬ ದೃಷ್ಟಿಯಿಂದ 'ಹೆಲ್ಪ್' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ. ಈ ಸಂಸ್ಥೆ ಹಲವಾರು ವರ್ಷ ಟ್ರಸ್ಟ್‌ನೊಂದಿಗೆ ಸಂಪರ್ಕವಿರಿಸಿಕೊಂಡು ಇಂಗ್ಲೆಂಡಿನಿಂದ ಹಾಗೂ ಎಡಿನ್‌ಬರೋದಿಂದ ಸ್ವಯಂ ಸೇವಾ ವಿದ್ಯಾರ್ಥಿಗಳನ್ನು ಕಳುಹಿಸಲು ಪ್ರಾರಂಭಿಸಿತು. ಸಾಮಾನ್ಯವಾಗಿ ಪ್ರತಿವರ್ಷ ಮಳೆಗಾಲದ ಸಮಯದಲ್ಲಿ ಹತ್ತು ಸದಸ್ಯರ ಯುವಕರ ತಂಡ ಐದು ವಾರಗಳ ಕಾಲ ಹೊಸ ಜೀವನ ದಾರಿ ಕೇಂದ್ರದಲ್ಲಿ ಇದ್ದುಕೊಂಡು ಯಾವುದಾದರೊಂದು ಉಪಯುಕ್ತವಾದ ಯೋಜನೆಯನ್ನು ಪ್ರಾಂಭಿಸಿ, ತಾವೂ ಅದರಲ್ಲಿ ಶಾರೀರಿಕವಾಗಿ, ಮಾನಸಿಕವಾಗಿ, ವೈಚಾರಿಕವಾಗಿ ಭಾಗವಹಿಸುವ ಸರಣಿ ಶಿಬಿರಗಳನ್ನು ಕೈಗೆತ್ತಿಕೊಂಡಿತು. ತಮ್ಮ ಶರೀರಶ್ರಮದ ಜೊತೆಗೆ ಆ ಯೋಜನೆಯ ಪೂರೈಕೆಗಾಗಿ ಧನ ಸಹಾಯವನ್ನೂ ಮಾಡುವುದು ಆ ಶಿಬಿರಗಳ ವೈಶಿಷ್ಟ್ಯವಾಗಿತ್ತು. ಈ ಶಿಬಿರಗಳಿಗೆ ಮಾರ್ಗದರ್ಶನ ನೀಡುವುದು, ಯೋಜನೆಯ ಪೂರೈಕೆಗೆ ಬೇಕಾದ ಸಾಮಾನು–ಸರಂಜಾಮುಗಳನ್ನು ಪೂರೈಸುವುದು, ಹೆಚ್ಚುವರಿ ಕೆಲಸಗಾರರನ್ನು ಒದಗಿಸುವುದು ಮತ್ತು ಸ್ವತಃ ಅವರೊಂದಿಗೆ ಕೆಲಸ ಮಾಡುತ್ತ ಅವರಿಗೆ ಸ್ಥಳೀಯ ಜನಜೀವನದ ಪರಿಚಯ ಮಾಡಿಕೊಡುವುದು ಇತ್ಯಾದಿ ಕೆಲಸಗಳನ್ನು ಸಂತೋಷ್ ನಿರ್ವಹಿಸುತ್ತಿದ್ದರು. ಹೊಸ ಜೀವನ ದಾರಿ ಕೇಂದ್ರದ ಸುಂದರ ಹಾಗೂ ಶಾಂತ ಪರಿಸರ ಮತ್ತು ಭವಿಷ್ಯದಲ್ಲಿ ಅದು ಸಮಾಜ ನಿರ್ಮಾಣ ಕಾರ್ಯದಲ್ಲಿ ವಹಿಸುವ ಜವಾಬ್ದಾರಿಗಳನ್ನು ಹಾಗೂ ಟ್ರಸ್ಟಿನ ಉದಾತ್ತ ಧ್ಯೇಯೋದ್ದೇಶಗಳನ್ನು ತಿಳಿದ 'ಹೆಲ್ಪ್' ಸಂಸ್ಥೆಯು ತನ್ನ ಸಹಕಾರದ ಹಸ್ತವನ್ನು ನೀಡುತ್ತಾ ಬಂದಿತು. ಇದರ ಫಲವಾಗಿ ಹೊಸ ಜೀವನ ದಾರಿ ಕೇಂದ್ರದಲ್ಲಿ ಆರು ಕಟ್ಟಡಗಳು ನಿರ್ಮಾಣಗೊಂಡವು, ತೆಂಗಿನಮರಗಳ ತೋಟವಾಯಿತು, ಕೆರೆಯ ರಚನೆಯಾಯಿತು. ಹೊಸ ಜೀವನ ದಾರಿ ಕೇಂದ್ರವು ಮೂಲಭೂತ ಸೌಕರ್ಯಗಳನ್ನು ಹೊಂದಿತು ಮತ್ತು ಹಸಿರು ಪರಿಸರದೊಂದಿಗೆ ಕಂಗೊಳಿಸಿತು. ಕೇಂದ್ರವು ಇನ್ನಷ್ಟು ಅಭಿವೃದ್ಧಿಗೊಳ್ಳುವುದಕ್ಕೆ ಮತ್ತು ಆ ಕೇಂದ್ರದ ಪರಿಚಯ ಸ್ಥಳೀಯ ಯುವಕರಿಗೆ ಆಗುವುದಕ್ಕೆ ಕಾರಣ ಆಗಾಗ್ಗೆ ನಡೆದ ಎನ್.ಎಸ್.ಎಸ್ ಶಿಬಿರಗಳು. ಈ ವಿಷಯದಲ್ಲಿ ಶ್ರೀ ಶಿವಪ್ಪಗೌಡರು ಮತ್ತು ಶ್ರೀ ಶಿವಣ್ಣನವರ ಸಹಕಾರ ಸ್ಮರಣೀಯವಾಗಿದೆ. ಎಲ್ಲಕ್ಕೂ ಮೊದಲು ನಡೆದದ್ದು 'ಸರ್ವಿಸ್ ಸಿವಿಲ್ ಇಂಟರ್‌ನ್ಯಾಷನಲ್' ಸಂಸ್ಥೆಯ ಶಿಬಿರ. ಈ ಶಿಬಿರದಲ್ಲಿ ಇಂಗ್ಲೆಂಡ್, ಅಮೇರಿಕಾ, ಜಪಾನ್ ಮತ್ತು ಕೆಲ ಇತರ ದೇಶಗಳ ಯುವಕರು ಭಾಗವಹಿಸಿ ತಮ್ಮ ಶ್ರಮದ ಮೂಲಕ ತೆಂಗಿನತೋಟ ನಿರ್ಮಿಸಿಕೊಟ್ಟಿದ್ದು ಹೊಸ ಜೀವನ ದಾರಿ ಕೇಂದ್ರದ ಬೆಳವಣಿಗೆಯಲ್ಲಿ ಮಹತ್ವದ ಘಟ್ಟ. ಆನಂತರ ನಡೆದ ರಾಷ್ಟ್ರೀಯ ಮಟ್ಟದ ಸರ್ವೋದಯ ವಿಚಾರದ ಯುವಕರ ಶಿಬಿರ. ಈ ಶಿಬಿರದಲ್ಲಿ ಭಾರತದ ಅನೇಕ ರಾಜ್ಯಗಳಿಂದ ಯುವಕರು ಬಂದಿದ್ದರು. ಸರ್ವೋದಯ ಆಂದೋಲನದ ನಾಯಕರು ಬಂದಿದ್ದರು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ ಸಂತೋಷ್‌ರವರ ವ್ಯಕ್ತಿತ್ವವು ಸಹಜವಾಗಿಯೇ ರೂಪುಗೊಂಡಿತು.

ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆದ ವಿವಿಧ ಶಿಬಿರಗಳಲ್ಲಿ ಭಾಗವಹಿಸಿದ್ದ ಅನೇಕ ಯುವಕರು ಜೀವನದ ವಿವಿಧ ರಂಗಗಳಲ್ಲಿ ಮುಂದೆ ಬಂದಿದ್ದಾರೆ. ವಿದೇಶದಿಂದ ಬಂದು ಕೆಲಸಮಾಡಿ ಹೋದ ಕೆಲ ಯುವಕರು ವಿಶ್ವರಾಷ್ಟ್ರ ಸಂಸ್ಥೆ ಮತ್ತು ಅಂತಾರಾಷ್ಟ್ರೀಯ ವಿತ್ತೀಯ ನಿಧಿಯಂಥ ಸಂಸ್ಥೆಗಳಲ್ಲಿ ಹಿರಿಯಸ್ಥಾನಗಳನ್ನು ಅಲಂಕರಿಸಿ ಕೆಲಸಮಾಡಿದ್ದಾರೆ. ಅವರಲ್ಲಿ ಅನೇಕರು ಹೊಸ ಜೀವನ ದಾರಿ ಕೇಂದ್ರದಲ್ಲಿ ತಾವು ಪಡೆದ ಅನುಭವ ತಮ್ಮ ಮುಂದಿನ ಜೀವನ ರೂಪಿಸುವಲ್ಲಿ ತುಂಬಾ ಪರಿಣಾಮ ಬೀರಿತೆಂಬುದಾಗಿ ತಿಳಿಸಿದ್ದಾರೆ.

(ಮುಂದುವರೆಯುವುದು....)

* * *

೨ನೇ ಪುಟದಿಂದ...

ದಾನಿಗಳು ಉದಾರವಾಗಿ ಟ್ರಸ್ಟಿನ ಕೆಲಸಗಳಿಗೆ ಧನ ಸಹಾಯ ಮಾಡಬಹುದು.

ಹಿರಿಯ ಕೃಷಿಕ ಆರೂರು ರಾಮಚಂದ್ರರಾಯರ ಮಗ ಶ್ರೀ ಆರೂರ ಮಂಜುನಾಥರವರು ಮತ್ತು ಸಾಹಿತಿ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರು ಟ್ರಸ್ಟಿಗೆ ಭೇಟಿಕೊಟ್ಟರು.

ದಸರಾ ರಜೆಯ ಪ್ರಯುಕ್ತ ಕರುಣಾಗೃಹದ ಮಕ್ಕಳು ತಮ್ಮ ತಮ್ಮ ಊರುಗಳಿಗೆ ಹೋದರು.

ಟ್ರಸ್ಟಿನ ಅಧ್ಯಕ್ಷರು ಸರ್.ಎಂ. ವಿಶ್ವೇಶ್ವರಯ್ಯನವರ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಮತ್ತು ಲೋಕನಾಯಕ ಜಯಪ್ರಕಾಶ ನಾರಾಯಣರವರ ಜನ್ಮದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಧರ್ಮದರ್ಶಿ ಸಂತೋಷ ಕೌಲಗಿಯವರು ಪುಕುವೊಕಾರ ಶ್ರದ್ಧಾಂಜಲಿ ಸಭೆಗಳಲ್ಲಿ ಭಾಗವಹಿಸಿದ್ದರು.

ಜನಪದ ಸೇವಾ ಟ್ರಸ್ಟಿನ ಜನಪ್ರಿಯ ಖಾದಿ ತಯಾರಿಕೆ ಹೆಗಲು ಚೀಲಗಳ ಉತ್ಪಾದನೆ ಪ್ರಾರಂಭವಾಗಿದೆ. ಸದ್ಯಕ್ಕೆ ಮೂವರು ಕೆಲಸಗಾರರು ಈ ಕೆಲಸದಲ್ಲಿ ತೊಡಗಿದ್ದಾರೆ.

೨೦೦೮ರ ಅಕ್ಟೋಬರ್ ಮಾಹೆಯ ದಾನಿಗಳು

ಶ್ರೀ ಬಿ.ಟಿ. ನಂಜುಂಡಸ್ವಾಮಿ, ಶ್ರೀ ಡಿ. ಪ್ರಭಾಕರ್, ಶ್ರೀಮತಿ ಛಾಯಾ ಆನಂದ್, ಶ್ರೀ ಕೆ.ಬಿ. ನಾರಾಯಣ್, ಶ್ರೀ ಡಿ.ವಿ. ಅವಿನಾಶ್, ಸತ್ಯಮಾರ್ಗ ಪತ್ರಿಕಾ ಬಳಗ, ಶ್ರೀ ಕುಪ್ಪಣ್ಣ, ಶ್ರೀಮತಿ ಜಯಾ ಮತ್ತು ಸುಶೀಲಾ, ಶ್ರೀಮತಿ ಗೀತಾರಾವ್ - ಬೆಂಗಳೂರು ಶ್ರೀ ಎಂ.ಎಸ್. ಸುಬ್ರಮಣ್ಯ - ಮೈಸೂರು, ಶ್ರೀ ನಾರಾಯಣ - ಮಾದಾಪುರ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳು

* * *

ಜನಪದ ಧ್ವನಿ

ಪ್ರಚಲಿತ ವಿಷಯಗಳ ಬಗ್ಗೆ ಓದುಗರ ವಿಚಾರ ಸ್ಪಂದನದ ಪ್ರಕಟಣೆಗಾಗಿ ಈ ಅಂಕಣ ಮೀಸಲು. ಆದ್ದರಿಂದ ಜಾಗೃತ ಓದುಗರು ತಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ಬರೆದ ಲೇಖನಕ್ಕೆ ಸ್ವಾಗತ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯುಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edit[illegible]inted and Published by Surendra Koulagi at Janapada Seva Trust Melkote, Dist- Mandya – 571431.Ph[illegible] 08236 – 299854, 316344
e-mail : janapada@yahoo.com Printed at Sanketh Mudrana, Melkote.